
ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ ವಾರ್ತಾಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

ಸಂಪುಟ : 3 । ಸಂಚಿಕೆ : 5 | ಜೂನ್ : 2021 | ಪುಟಗಳು : 20 । ಬೆಲೆ : 25/–





## ಕೊರೋನಾ ಲಾಕ್‌ಡೌನ್ ಹಿನ್ನೆಲೆ : ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಂದ ರೂ. 1,250 ಕೋಟಿ ಮೊತ್ತದ ಪ್ಯಾಕೇಜ್ ಘೋಷಣೆ


## ಕೋವಿಡ್ ಪರಿಹಾರ ನಿಧಿಗೆ ಅಪೆಕ್ಸ್ ಬ್ಯಾಂಕ್‌ನಿಂದ 5 ಕೋಟಿ ರೂ. ದೇಣಿಗೆ






## ಜೂನ್ 5 ವಿಶ್ವ ಪರಿಸರ ದಿನ

# ಮುಖ್ಯಮಂತ್ರಿಗಳ ಕೊರೋನಾ ಪರಿಹಾರ ನಿಧಿಗೆ ಅಪೆಕ್ಸ್ ಬ್ಯಾಂಕ್‌ನಿಂದ 5 ಕೋಟಿ ರೂ. ದೇಣಿಗೆ





ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 5 ಕೋಟಿ ರೂಪಾಯಿ ದೇಣಿಗೆಯನ್ನು ಅಪೆಕ್ಸ್ ಬ್ಯಾಂಕ್ ನೀಡಿದ್ದು, ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ಅವರು ಎಂದು ಮುಖ್ಯಮಂತ್ರಿಗಳಿಗೆ ಚೆಕ್ಕನ್ನು ಹಸ್ತಾಂತರಿಸಿದರು. ಇದೇ ವೇಳೆ 1 ಲಕ್ಷ **N**–95 ಮಾಸ್ಕ್ ಅನ್ನು ಸಹ ಮುಖ್ಯಮಂತ್ರಿಗಳಿಗೆ ಅಪೆಕ್ಸ್ ಬ್ಯಾಂಕ್ ವತಿಯಿಂದ ನೀಡಲಾಯಿತು. ಇದೇ ವೇಳೆ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರೂ ಆದ ಶಾಸಕರಾದ ಬೆಳ್ಳಿಪ್ರಕಾಶ್ ಮಾರಾಟ ಮಹಾಮಂಡಳದ ಅಧ್ಯಕ್ಷರಾದ ರಾಜೇಂದ್ರ ಕುಮಾರ್, ಅಪೆಕ್ಸ್ ಬ್ಯಾಂಕ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಸಿ.ಎನ್.ದೇವರಾಜ್ ಅವರುಗಳು ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರಿನ ದೊಡ್ಡಕಾನ್ಯ ಕೋವಿಡ್ ಕೇರ್ ಸೆಂಟರ್‌ಗೆ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಹಾಗೂ ಶಾಸಕರಾದ ಜಿ.ಟಿ.ದೇವೇಗೌಡ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಗ್ರಾಮೀಣ ಭಾಗದಲ್ಲಿ ಕೋರೋನ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೋವಿಡ್ 2ನೇ ಅಲೆಯ ಗಾಳಿ ಸುದ್ದಿಗಳಿಗೆ ಗ್ರಾಮಸ್ಥರು ಭಯಭೀತರಾಗಬೇಕಿಲ್ಲ, ಕೋವಿಡ್ ಪಾಸಿಟಿವ್ ಕಂಡುಬಂದವರನ್ನು ಪ್ರತ್ಯೇಕಿಸಿ ಕೊರೊನಾ ಕೇರ್ ಸೆಂಟರ್, ಹೋಂ ಐಸೋಲೇಷನ್‌ಗೆ ಕಳಿಸಿದರೆ ಬೇರೆಯವರಿಗೆ ಹರಡುವ ಸಾಧ್ಯತೆ ಇರುವುದಿಲ್ಲ, ಆದರೂ ಪ್ರತಿಯೊಬ್ಬರು ಮುಂಜಾಗ್ರತಾ ಕ್ರಮ ಪಾಲಿಸಬೇಕೆಂದು ಶಾಸಕ ಜಿ.ಟಿ. ದೇವೇಗೌಡ ಸಲಹೆ ಮಾಡಿದರು.

# ೮೦ ಎನ್‌ಪಿಎ ಖಾತೆಗಳು ಬ್ಯಾಡ್ ಬ್ಯಾಂಕ್‌ಗೆ




**ನವದೆಹಲಿ :** ದೊಡ್ಡ ಮೊತ್ತದ 80 ಎನ್‌ಪಿಎ ಖಾತೆಗಳನ್ನು ಬ್ಯಾಂಕ್‌ಗಳು 'ರಾಷ್ಟ್ರೀಯ ಆಸ್ತಿ ಪುನರ್‌ರಚನಾ ಕಂಪನಿ'ಗೆ (ಎನ್‌ಎಆರ್‌ಸಿಎಲ್) ವರ್ಗಾವಣೆ ಮಾಡುವ ಸಾಧ್ಯತೆ ಇದೆ. ಈ ಕಂಪನಿಯು ಜೂನ್ ತಿಂಗಳಿಂದ ಕೆಲಸ ಆರಂಭಿಸುವ ನಿರೀಕ್ಷೆ ಇದೆ. 2021–22ನೇ ಸಾಲಿನ ಬಜೆಟ್‌ನಲ್ಲಿ ಎನ್‌ಎಆರ್‌ಸಿಎಲ್ (ಅಥವಾ ಬ್ಯಾಡ್‌ಬ್ಯಾಂಕ್) ಆರಂಭಿಸುವ ಘೋಷಣೆ ಮಾಡಲಾಗಿದೆ. ಮಾಮೂಲಿ ಬ್ಯಾಂಕ್‌ಗಳ ಎನ್‌ಪಿಎ ಖಾತೆಗಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡು, ಸಾಲ ವಸೂಲಿಗೆ ಸಂಬಂಧಿಸಿದ ಮುಂದಿನ ಕ್ರಮಗಳನ್ನು ಬ್ಯಾಡ್ ಬ್ಯಾಂಕ್ ಕೈಗೊಳ್ಳುತ್ತದೆ. ಬ್ಯಾಡ್ ಬ್ಯಾಂಕ್‌ಗೆ ವಹಿಸಲು ಗುರುತಿಸಿರುವ ಎನ್‌ಪಿಎ ಖಾತೆಗಳು ತಲಾ ರೂ.500 ಕೋಟಿಗಿಂತ ಹೆಚ್ಚಿನ ಸಾಲ ಬಾಕಿ ಇರಿಸಿಕೊಂಡಿವೆ ಎಂದು ಮೂಲಗಳು ತಿಳಿಸಿವೆ.

ಬ್ಯಾಡ್‌ಬ್ಯಾಂಕ್ ಆರಂಭವಾದ ನಂತರ, ಒಟ್ಟು ರೂ. 2 ಲಕ್ಷ ಕೋಟಿಗಿಂತ ಹೆಚ್ಚಿನ ಮೌಲ್ಯದ ಎನ್‌ಪಿಎ ಖಾತೆಗಳು ಬ್ಯಾಂಕ್‌ಗಳಿಂದ ಬ್ಯಾಡ್ ಬ್ಯಾಂಕ್‌ಗೆ ವರ್ಗಾವಣೆ ಆಗುವ ನಿರೀಕ್ಷೆ ಇದೆ. ವಂಚನೆ ಎಂದು ಘೋಷಣೆ ಆಗಿರುವ ಖಾತೆಗಳು ಬ್ಯಾಡ್ ಬ್ಯಾಂಕ್‌ಗೆ ವರ್ಗಾವಣೆ ಆಗುವುದಿಲ್ಲ.

**ಬ್ಯಾಡ್ ಬ್ಯಾಂಕ್ : ಜೂನ್‌ನಿಂದ ಕಾರ್ಯಾರಂಭ ನಿರೀಕ್ಷೆ :** ರಾಷ್ಟ್ರೀಯ ಆಸ್ತಿ ಪುನರ್‌ರಚನಾ ಕಂಪನಿಯು (ಎನ್‌ಎಆರ್‌ಸಿಎಲ್ – ಬ್ಯಾಡ್ ಬ್ಯಾಂಕ್) ಜೂನ್ ತಿಂಗಳಿನಿಂದ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ ಎಂದು ಭಾರತೀಯ ಬ್ಯಾಂಕುಗಳ ಒಕ್ಕೂಟದ (ಐಬಿಎ) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸುನಿಲ್ ಮೆಹ್ತಾ ತಿಳಿಸಿದ್ದಾರೆ.

ಬ್ಯಾಂಕ್‌ಗಳಲ್ಲಿನ ವಸೂಲಾಗದ ಸಾಲದ (ಎನ್‌ಪಿಎ) ಸಮಸ್ಯೆ ಇತ್ಯರ್ಥಪಡಿಸಲು ಸಾರ್ವಜನಿಕ ಮತ್ತು ಖಾಸಗಿ ಬ್ಯಾಂಕ್‌ಗಳ ಸಹಯೋಗದೊಂದಿಗೆ ಇದನ್ನು ಸ್ಥಾಪಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ. ಇದಕ್ಕೆ ಬ್ಯಾಡ್ ಬ್ಯಾಂಕ್ ಎಂದೂ ಹೇಳಲಾಗುತ್ತದೆ.

ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳು ಎನ್‌ಪಿಎ ಎಂದು ಗುರುತಿಸುವ ಸಾಲಗಳನ್ನು ಬ್ಯಾಡ್ ಬ್ಯಾಂಕ್‌ಗೆ ಖರೀದಿಸಲಿದೆ ಎಂದು ಮೆಹ್ತಾ ಹೇಳಿದ್ದಾರೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2021–22ರ ಬಜೆಟ್‌ನಲ್ಲಿ ಬ್ಯಾಡ್ ಬ್ಯಾಂಕ್ ಸ್ಥಾಪಿಸುವ ಪ್ರಸ್ತಾವ ಮಾಡಿದ್ದರು. ವಂಚನೆ ಎಂದು ವರ್ಗೀಕರಿಸಿರುವ ಸಾಲವನ್ನು ಬ್ಯಾಡ್ ಬ್ಯಾಂಕ್‌ಗೆ ಮಾರಾಟ ಮಾಡುವಂತಿಲ್ಲ ಎಂದು ಆರ್‌ಬಿಐ ಹೇಳಿದೆ. ಆರ್‌ಬಿಐನ ವಾರ್ಷಿಕ ವರದಿಯ ಪ್ರಕಾರ, 2020ರ ಮಾರ್ಚ್ ಅಂತ್ಯಕ್ಕೆ 1.9 ಲಕ್ಷ ಕೋಟಿ ಸಾಲಗಳನ್ನು ವಂಚನೆ ಎಂದು ವರ್ಗೀಕರಿಸಲಾಗಿದೆ.


## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**

SAHAKARA VARTHA PATHRIKE KANNADA MONTHLY
RNI-REG NO : KARKAN/2018/75796
POST REG NO : KNBGW-1816/2019-2021
POSTING DATE : 1 & 5. EVERY MONTH
POSTED AT : P/C RMS BHAVAN, BANGALORE PSO,
Blore-26 PUBLISHED ON : 31st of Previous Month

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತಮಂಡಳಿ


ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು


ಡಾ. ಬಿ.ಡಿ. ಭೂಕಾಂತ
ಉಪಾಧ್ಯಕ್ಷರು


ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು


ಶ್ರೀ ವಿ. ರಾಜು
ನಿರ್ದೇಶಕರು


ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು


ಶ್ರೀ ಎಂ.ಜೆ. ನರೇಂದ್ರ ಕುಮಾರ
ನಿರ್ದೇಶಕರು


ಶ್ರೀ ಡಿ. ಚನ್ನಯ್ಯ
ನಿರ್ದೇಶಕರು


ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು


ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು


ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಶ್ರೀ ಧರೇಪ್ಪ ಎಂ. ಅಲಗೂರ
ನಿರ್ದೇಶಕರು


ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು


ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು


ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು


ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು


ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು


ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು


ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು


ಶ್ರೀ ಕೆ.ಎಸ್.ಗುರುಪ್ರಸಾದ್
ಸಲಹೆಗಾರರು


ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು
ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

Printed at : Biligiri Printers
Chamrajpet, Bengaluru - 18.






ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ
ಅಧ್ಯಕ್ಷರು

> "ಭಾರತದ ಜನಸಂಖ್ಯೆ ಹೆಚ್ಚಳವಿರುವ ಕಾರಣ ಮಾರುಕಟ್ಟೆಗಳಲ್ಲಿ ನಿಗದಿತ ಅವಧಿಯೊಳಗೆ ಖರೀದಿಗೆ ಅವಕಾಶವಿರುವ ಕಾರಣಗಳಿಂದ ಜನದಟ್ಟಣೆ ಹೆಚ್ಚಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸೋಂಕು ಹರಡುವಿಕೆ ಹೆಚ್ಚಲು ಸಾಧ್ಯವಾಗಬಹುದು. ಈ ಬಗ್ಗೆ ಜನತೆ ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕಾಗುತ್ತದೆ."

# ಕೋವಿಡ್-19ರ ನಿಯಂತ್ರಣಕ್ಕೆ ಸಹಕಾರ ಸಂಘಗಳು ನೆರವಾಗಲಿ




ದೇಶದಲ್ಲಿ ಕೊರೋನಾ ಮಹಾಮಾರಿಯ ಸೋಂಕಿನಿಂದ ಕರ್ನಾಟಕ ರಾಜ್ಯದಲ್ಲಿ ಪ್ರತಿನಿತ್ಯ ಸೋಂಕಿತರ ಸಂಖ್ಯೆ ಹೆಚ್ಚಳಕಂಡು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ. ಪ್ರತಿನಿತ್ಯ ಗುಣಮುಖರಾಗುತ್ತಿರುವುದು ಸಂತಸದ ವಿಚಾರವಾದರೂ ಪ್ರತಿನಿತ್ಯ ನೂರಾರು ಜನರು ಮರಣ ಹೊಂದುತ್ತಿರುವುದು ನೋವಿನ ಸಂಗತಿವಾಗಿದೆ.

ಕೋರೋನಾ ಎರಡನೇ ಅಲೆಯಲ್ಲಿ ಮಧ್ಯ ವಯಸ್ಸಿನ ಜನರು, ಹಿರಿಯರು, ಕೆಲವೆಡೆ ಮಕ್ಕಳು ಮರಣ ಹೊಂದುತ್ತಿರುವುದರಿಂದ ಅವರುಗಳ ಕುಟುಂಬದ ನೋವು ಹೆಚ್ಚಾಗುತ್ತಿದೆ.

ರಾಜ್ಯದಲ್ಲಿ 45 ಸಾವಿರಕ್ಕೂ ಅಧಿಕ ಸಹಕಾರ ಸಂಘ ಸಂಸ್ಥೆಗಳಿವೆ. ಬಹುತೇಕ ಸಂಘಗಳು ಲಾಭದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಸಹಕಾರ ಸಂಘಗಳಲ್ಲಿ 2.40 ಕೋಟಿ ಸದಸ್ಯ ಬಳಗವಿದೆ. ಆದ್ದರಿಂದ ಸಂಸ್ಥೆಗಳು ಇಂಥ ಸಂದಿಗ್ದ ಸಮಯದಲ್ಲಿ ಜನರಿಗೆ ಆರೋಗ್ಯ ರಕ್ಷಣೆಯ ಬಗ್ಗೆ ಧೈರ್ಯ ತುಂಬುವ ಕೆಲಸ ಮಾಡಬೇಕಾಗಿದೆ. ತಂತ್ರಜ್ಞಾನ ಮುಂದುವರೆದಿರುವ ಕಾರಣ ಸದಸ್ಯರ ಮೊಬೈಲು ಸಂಖ್ಯೆಗಳಿಗೆ ಸಂದೇಶ ಕಳುಹಿಸಿ ಜಾಗೃತಿ ಮೂಡಿಸುವುದು. ಸದಸ್ಯರು ಮತ್ತು ಅವರ ಕುಟುಂಬದ ಸದಸ್ಯರುಗಳ ಜೀವ ವಿಮೆ ಮಾಡಿಸಿಕೊಳ್ಳುವ ಬಗ್ಗೆ ಜಾಗೃತಿ ಮೂಡಿಸುವುದು. ತೀರಾ ಬಡತನದಲ್ಲಿರುವ ಜನರಿಗೆ ಆಹಾರ, ಔಷಧದ ಕಿಟ್ಟುಗಳನ್ನು ನೀಡಿ ಸಹಕಾರ ತತ್ವಗಳಲ್ಲಿ ಒಂದಾದ ಸಾಮಾಜಿಕ ಕಳಕಳಿಯನ್ನು ತೋರುವುದು ಆಗಬೇಕಿದೆ.

ಭಾರತದ ಜನಸಂಖ್ಯೆ ಹೆಚ್ಚಳವಿರುವ ಕಾರಣ ಮಾರುಕಟ್ಟೆಗಳಲ್ಲಿ ನಿಗದಿತ ಅವಧಿಯೊಳಗೆ ಖರೀದಿಗೆ ಅವಕಾಶವಿರುವ ಕಾರಣಗಳಿಂದ ಜನದಟ್ಟಣೆ ಹೆಚ್ಚಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸೋಂಕು ಹರಡುವಿಕೆ ಹೆಚ್ಚಲು ಸಾಧ್ಯವಾಗಬಹುದು. ಈ ಬಗ್ಗೆ ಜನತೆ ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕಾಗುತ್ತದೆ.

ಸಹಕಾರ ಸಚಿವ ಶ್ರೀ ಎಸ್.ಟಿ. ಸೋಮಶೇಖರ್ ಅವರು ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿನಿಂದ ಮೃತಪಟ್ಟ ಜನರ ಕುಟುಂಬದ ಸದಸ್ಯರುಗಳಿಗೆ ವೈಯಕ್ತಿವಾಗಿ ತಲಾ ಒಂದು ಲಕ್ಷ ರೂಪಾಯಿಗಳಂತೆ ಆರ್ಥಿಕ ನೆರವು ನೀಡುತ್ತಿರುವುದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ ಹಾಗು ಶಾಸಕರುಗಳು, ಜನಪ್ರತಿನಿಧಿಗಳು, ಸಹಕಾರಿ ಸಂಸ್ಥೆಗಳು, ಸಹಕಾರಿಗಳು ಕೂಡ ಸಂಕಷ್ಟದಲ್ಲಿರುವ ಜನರಿಗೆ ನೆರವಾಗುತ್ತಿರುವುದನ್ನು ಕಂಡಿದ್ದೇವೆ. ಇವರೆಲ್ಲರಿಗೂ ಪತ್ತಿನ ಸಹಕಾರ ಮಹಾಮಂಡಳದ ಆಡಳಿತಮಂಡಳಿಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮುಂಬರುವ ದಿನಗಳಲ್ಲಿಯೂ ಸಹಕಾರ ಸಂಸ್ಥೆಗಳು, ಸಹಕಾರಿಗಳು ಸಂಕಷ್ಟದಲ್ಲಿರುವ ಜನರಿಗೆ ನೆರವಾಗಿ ಕೋವಿಡ್ ಮುಕ್ತ ನಾಡನ್ನು ಕಟ್ಟುವಂತಾಗಲಿ ಎಂದು ಆಶಿಸುತ್ತೇನೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು :
**ಡಾ. ಬಿ.ಡಿ. ಭೂಕಾಂತ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಲಹೆಗಾರರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ಕೇಂದ್ರ ಸರಕಾರಕ್ಕೆ ರೂ. 1 ಲಕ್ಷ ಕೋಟಿ ಲಾಭಾಂಶ ನೀಡಿದ ಆರ್‌ಬಿಐ




**ಮುಂಬಯಿ :** ಭಾರತೀಯ ರಿಸರ್ವ್ ಬ್ಯಾಂಕ್ ನಿರೀಕ್ಷೆಗೂ ಮೀರಿ 99.12 ಸಾವಿರ ಕೋಟಿ ರೂ. ಲಾಭಾಂಶವನ್ನು ಕೇಂದ್ರ ಸರಕಾರಕ್ಕೆ ನೀಡಲು ನಿರ್ಧರಿಸಿದೆ. ಕೊರೊನಾದಿಂದ ಆದಾಯ ದೊಡ್ಡ ಮಟ್ಟಕ್ಕೆ ಕುಸಿತವಾಗಿದ್ದು, ಸರಕಾರದ ಬೊಕ್ಕಸ ಬರಿದಾಗಿದೆ. ಇದೇ ಹೊತ್ತಲ್ಲಿ ದಾಖಲೆಯ ಲಾಭಾಂಶದ ರೂಪದಲ್ಲಿ ಕೇಂದ್ರ ಸರಕಾರಕ್ಕೆ ಬಂಪರ್‌ಗಿಫ್ಟ್ ಸಿಕ್ಕಿದೆ.

ಆರ್‌ಬಿಐ ಪ್ರತಿ ವರ್ಷ ತನ್ನ ವಹಿವಾಟಿನಿಂದ ಗಳಿಸಿದ ಹೆಚ್ಚುವರಿ ಹಣವನ್ನು ಲಾಭಾಂಶದ ರೂಪದಲ್ಲಿ ಸರಕಾರಕ್ಕೆ ಪಾವತಿಸುತ್ತದೆ. ಮಾರುಕಟ್ಟೆ ಕಾರ್ಯಾಚರಣೆಗಳು, ಹೂಡಿಕೆ, ನಗದು ಮುದ್ರಣ ಆರ್‌ಬಿಐನ ಆದಾಯದ ಮೂಲವಾಗಿದೆ. 99.12 ಸಾವಿರ ಕೋಟಿ ರೂ. ವಿತರಣೆಗೆ ಆರ್‌ಬಿಐನ ಆಡಳಿತ ಮಂಡಳಿ ಶುಕ್ರವಾರ ಅನುಮೋದನೆ ನೀಡಿದೆ.

ಸರಕಾರ ಬಜೆಟ್‌ನಲ್ಲಿ ಒಟ್ಟು 1.04 ಲಕ್ಷ ಕೋಟಿ ರೂ. ಲಾಭಾಂಶದ ನಿರೀಕ್ಷೆ ವ್ಯಕ್ತಪಡಿಸಿತ್ತು. ಇದರ ಶೇ.95ರಷ್ಟು ಭಾಗವನ್ನು ಆರ್‌ಬಿಐ ಒಂದೇ ಪಾವತಿ ಮಾಡುತ್ತಿದೆ. ಆರ್‌ಬಿಐ, ಸರಕಾರ ನಿರೀಕ್ಷಿಸಿದ್ದಕ್ಕಿಂತ ದುಪ್ಪಟ್ಟು ಮೊತ್ತವನ್ನು ಪಾವತಿ ಮಾಡಲಿದೆ. ಕಳೆದ ವರ್ಷ ಆರ್‌ಬಿಐ 55,713 ಕೋಟಿ ರೂ.ಗಳನ್ನು ಕೇಂದ್ರ ಸರಕಾರಕ್ಕೆ ಪಾವತಿ ಮಾಡಿತ್ತು. ಆದರೆ ಇದನ್ನು ಈಗಿನ ಲಾಭಾಂಶದ ಜತೆ ಹೋಲಿಕೆ ಮಾಡುವುದು ಅಸಾಧ್ಯ. ಕಾರಣ ಇತ್ತೀಚೆಗೆ ಆರ್‌ಬಿಐ ಹಣಕಾಸು ವರ್ಷವನ್ನು ಜುಲೈ–ಜೂನ್ ನಿಂದ ಏಪ್ರಿಲ್–ಮಾರ್ಚ್‌ಗೆ ಬದಲಾಯಿಸಿತ್ತು.

**ಸುಭಾಷಿತ :** ಲೋಕದಲ್ಲಿ ಎಷ್ಟು ಜನರಿದ್ದಾರೋ ಅಷ್ಟು ಅನುಭವಗಳಿವೆ. ಅವುಗಳಲ್ಲಿ ಕೆಲವು ಗ್ರಾಹ್ಯವಾದವು, ಕೆಲವು ತ್ಯಾಜ್ಯ ಎಂದು ನಿರ್ಧಾರ ಮಾಡುವ ಒರೆಗಲ್ಲು ಯಾವುದು? ಅವರವರ ಸ್ವಂತ ಅನುಭವವೆ. – ಜಿ.ಪಿ. ರಾಜರತ್ನಂ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.



# ಕೊರೋನಾ ಲಾಕ್‌ಡೌನ್ - ಕರ್ಫ್ಯೂ ಹಿನ್ನಲೆ ಆರ್ಥಿಕವಾಗಿ ಅಬಲರಾದವರಿಗೆ
# ರೂ. 1,250 ಕೋಟಿ ಮೊತ್ತದ ಪ್ಯಾಕೇಜ್
## ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಣೆ

**ಬೆಂಗಳೂರು :** ಕರ್ನಾಟಕ ಸೇರಿದಂತೆ ದೇಶಾದ್ಯಂತ ಕೊರೋನಾ ಎರಡನೇ ಅಲೆ ತೀವ್ರವಾಗಿ ಹೆಚ್ಚಳವಾಗಿದ್ದರಿಂದ ಲಾಕ್ ಡೌನ್ ಮಾಡುವುದು ಅನಿವಾರ್ಯವಾಗಿತ್ತು. ಈ ಲಾಕ್‌ಡೌನ್ ನಿಂದ ಹಲವು ಅಸಂಘಟಿತ ವಲಯಗಳಿಗೆ, ರೈತರಿಗೆ, ದಿನಗೂಲಿ ನೌಕರರಿಗೆ, ಬಡವರು–ನಿರ್ಗತಿಕರಿಗೆ ತೀವ್ರ ಸಂಕಷ್ಟವಾಗಿರುವ ಹಿನ್ನೆಲೆಯಲ್ಲಿ ಸರ್ಕಾರ ಸುಮಾರು 1,250 ಕೋಟಿ ರೂಪಾಯಿಗೂ ಅಧಿಕ ವಿಶೇಷ ಪರಿಹಾರ ಪ್ಯಾಕೇಜ್ ಅನ್ನು ವಿವಿಧ ವರ್ಗಗಳ ಹಿತರಕ್ಷಣೆಗೆ ಬಿಡುಗಡೆ ಮಾಡಿದೆ.

ಕಳೆದವಾರ ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಚಿವ ಸಂಪುಟದ ಸಹೋದ್ಯೋಗಿಗಳ ಜೊತೆ ಸಭೆ ನಡೆಸಿ ಚರ್ಚೆ ಮಾಡಿ ತೆಗೆದುಕೊಂಡ ತೀರ್ಮಾನಗಳು, ಪರಿಹಾರಗಳನ್ನು ಮಾಧ್ಯಮ ಪ್ರತಿನಿಧಿಗಳ ಮುಂದೆ ಪ್ರಕಟಿಸಿದರು.

ಕೊರೋನಾ ಸೋಂಕಿನ ತೀವ್ರವಾದ ಎರಡನೇ ಅಲೆಯಿಂದ ತಪ್ಪಿಸಿಕೊಳ್ಳಲು ಜಾರಿ ಮಾಡಿರುವ ಲಾಕ್‌ಡೌನ್ ಮೇ 24ರವರೆಗೆ ಜಾರಿಯಲ್ಲಿರುತ್ತದೆ. ರಾಜ್ಯದ ಜನತೆಯ ಆರೋಗ್ಯ ಹಿತದೃಷ್ಟಿಯಿಂದ ಈ ತೀರ್ಮಾನ ತೆಗೆದುಕೊಳ್ಳಲಾಗಿದ್ದು, ಈ ನಿರ್ಬಂಧದಿಂದ ವ್ಯಾಪಾರ – ವಾಣಿಜ್ಯ ಚಟುವಟಿಕೆಗಳು ಕ್ಷೀಣಿಸಿ ಸಮಾಜದ ಹಲವು ವರ್ಗಗಳ ಜನರ ಬದುಕಿನ ಮೇಲೆ ತೀವ್ರ ಹೊಡೆತ ಬಿದ್ದಿರುವ ಬಗ್ಗೆ ಸರ್ಕಾರಕ್ಕೆ ಅರಿವಿದೆ, ಸರ್ಕಾರ ಯಾವತ್ತಿಗೂ ಜನರ ಪರವಾಗಿರುತ್ತದೆ ಎಂದು ಆಶ್ವಾಸನೆ ನೀಡುತ್ತೇನೆ ಎಂದರು.

**ಮುಖ್ಯಮಂತ್ರಿಗಳು ಪ್ರಕಟಿಸಿದ ಪರಿಹಾರ ಪ್ಯಾಕೇಜ್‌ನಲ್ಲಿ ಯಾರ್ಯಾರಿಗೆ ಎಷ್ಟೆಷ್ಟು? :** 1,250 ಕೋಟಿಗೂ ಹೆಚ್ಚು ವಿಶೇಷ ಆರ್ಥಿಕ ಪ್ಯಾಕೇಜ್ ನಲ್ಲಿ ಸರ್ಕಾರದಿಂದ ಹೊಸ ಕಾರ್ಯಕ್ರಮ ಮಾಡಲು ತೀರ್ಮಾನಿಸಿದ್ದು, ರಾಜ್ಯದ ಅನೇಕ ಜಿಲ್ಲೆಗಳಲ್ಲಿನ ಹೂವು ಬೆಳೆಗಾರರಿಗೆ ಪ್ರತಿ ಹೆಕ್ಟೇರ್ ಹೂವು ಹಾನಿಗೆ 10 ಸಾವಿರದಂತೆ ಸಹಾಯಧನ–ಇದರಿಂದ ಸುಮಾರು 20 ಸಾವಿರ ರೈತರಿಗೆ ಇದರಿಂದ ಸಹಾಯ–12.73 ಕೋಟಿ ರೂ ಇದರಿಂದ ಸರ್ಕಾರಕ್ಕೆ ಖರ್ಚು.

- ರೈತರು, ಸ್ವಸಹಾಯ ಸಂಘಗಳು, ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು, ಭೂ ಅಭಿವೃದ್ಧಿ ಬ್ಯಾಂಕುಗಳಿಂದ ಸಾಲ ಪಡೆದಿರುವ ರೈತರ ಸಣ್ಣ ಮತ್ತು ಮಧ್ಯಮ ಗಾತ್ರದ ಸಾಲ ಮರುಪಾವತಿ ದಿನಾಂಕ : 1.5.2020ರಿಂದ 31.7.2021 ರವರೆಗೆ ವಿಸ್ತರಣೆ, 4.25 ಲಕ್ಷ ಜನರಿಗೆ ಇದರಿಂದ ಅನುಕೂಲ, ಸುಮಾರು 135 ಕೋಟಿ ರೂ. ಖರ್ಚು.



- 18 ರಿಂದ 60 ವರ್ಷದವರೆಗಿನವರಿಗೆ ಉಚಿತವಾಗಿ ಲಸಿಕೆ ನೀಡಲು ನಿರ್ಧರಿಸಿದ್ದು, ಈಗಾಗಲೇ 3 ಕೋಟಿ ಡೋಸ್ ತರಿಸಲಾಗಿದೆ ಇದಕ್ಕೆ 1 ಸಾವಿರ ಕೋಟಿ ರೂ. ಭರಿಸಲಾಗಿದೆ.
- ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಉಂಟಾಗಿರುವ ನಷ್ಟಕ್ಕೆ ಕನಿಷ್ಠ 1 ಹೆಕ್ಟೇರ್ ನಿಂದ ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂಪಾಯಿಗಳಂತೆ ಧನಸಹಾಯ, ಇದರಿಂದ 60ರಿಂದ 70 ಸಾವಿರ ರೈತರಿಗೆ ಅನುಕೂಲ–70 ಕೋಟಿ ರೂ. ಖರ್ಚು.
- ಆಟೋ, ಟ್ಯಾಕ್ಸಿ, ಮ್ಯಾಕ್ಸಿ ಕ್ಯಾಬ್ ಚಾಲಕರಿಗೆ, ಲೈಸೆನ್ಸ್ ಹೊಂದಿರುವವರಿಗೆ ನೋಂದಣಿ ಮಾಡಿಸಿದ ಪ್ರತಿಯೊಬ್ಬ ಚಾಲಕನಿಗೆ ತಲಾ 3 ಸಾವಿರ ರೂಪಾಯಿಗಳಂತೆ ಸರ್ಕಾರಕ್ಕೆ 65 ಕೋಟಿ ರೂ. ಖರ್ಚು.
- ಕಟ್ಟಡ ಕಾರ್ಮಿಕರಿಗೆ ತಲಾ 3 ಸಾವಿರದಂತೆ ಕರ್ನಾಟಕ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿ ಮಾಡಿಸಿಕೊಂಡವರಿಗೆ ಕೊಡಲು ತೀರ್ಮಾನ ಇದಕ್ಕೆ 494 ಕೋಟಿ ರೂ ಖರ್ಚು.
- ಅಸಂಘಟಿತ ವಲಯ ಕಾರ್ಮಿಕರಿಗೆ ತಲಾ 2 ಸಾವಿರ ರೂಪಾಯಿಗಳಂತೆ 3 ಲಕ್ಷದ 5 ಸಾವಿರ ಜನಕ್ಕೆ 61 ಕೋಟಿ ರೂಪಾಯಿ ಖರ್ಚು ಮಾಡಲು ಸರ್ಕಾರ ತೀರ್ಮಾನ.
- ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುವವರಿಗೆ ತೊಂದರೆಯಲ್ಲಿದ್ದಾರೆ ಎಂಬ ಕಾರಣಕ್ಕೆ ತಲಾ 2 ಸಾವಿರ ರೂಪಾಯಿಗಳಂತೆ 2 ಲಕ್ಷದ 20 ಸಾವಿರ ಜನರಿಗೆ 45 ಕೋಟಿ ರೂಪಾಯಿ ಖರ್ಚಿನಂತೆ ನೀಡಲಿದ್ದೇವೆ.
- ಕಲಾವಿದರು, ಕಲಾವಿದರ ತಂಡಗಳಿಗೆ ತಲಾ 3 ಸಾವಿರ ರೂಪಾಯಿಗಳಂತೆ 16 ಸಾವಿರ ಜನಕ್ಕೆ ಸರ್ಕಾರ ಧನಸಹಾಯ ನೀಡಲಿದ್ದು 4 ಕೋಟಿ 85 ಲಕ್ಷ ಸರ್ಕಾರ ವಿನಿಯೋಗಿಸಲಿದೆ.
- ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ

ಕೇಂದ್ರ ಸರ್ಕಾರದಿಂದ ಮೇ ಮತ್ತು ಜೂನ್ ತಿಂಗಳಿಗೆ ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡು ಹೊಂದಿರುವವರಿಗೆ 5 ಕೆಜಿ ಅಕ್ಕಿ ಉಚಿತವಾಗಿ ನೀಡಲಾಗುತ್ತಿದ್ದು, ರಾಜ್ಯದ 30 ಲಕ್ಷ ಜನರಿಗೆ ಹೆಚ್ಚುವರಿಯಾಗಿ ಈ ಯೋಜನೆ ನೀಡಲಾಗಿದ್ದು ಇದಕ್ಕಾಗಿ ಸರ್ಕಾರ 180 ಕೋಟಿ ಖರ್ಚು.

- ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವ ಜನರಿಗೆ ಪಡಿತರ ಚೀಟಿಯನ್ನು ವಿತರಿಸದೇ ಇದ್ದಲ್ಲಿ ಅಂತಹವರಿಗೂ ಸಹ ಮೇ ಮತ್ತು ಜೂನ್ ತಿಂಗಳಿಗೆ ಪ್ರತಿ ಬಿ.ಪಿ.ಎಲ್. ಅರ್ಜಿದಾರರಿಗೆ ಉಚಿತವಾಗಿ 10 ಕೆ.ಜಿ. ಆಹಾರಧಾನ್ಯ ಹಾಗೂ ಎ.ಪಿ.ಎಲ್. ಅರ್ಜಿದಾರರಿಗೆ ಪ್ರತಿ ಕೆ.ಜಿ.ಗೆ 15 ರೂಪಾಯಿಗಳಂತೆ 10 ಕೆ.ಜಿ. ಆಹಾರಧಾನ್ಯವನ್ನು ನೀಡಲಾಗುವುದು ಎಂದು ತಿಳಿಸಿದ್ದಾರೆ. ಇದರಿಂದ ಒಟ್ಟು 3.10 ಲಕ್ಷ ಅರ್ಜಿದಾರರಿಗೆ ಸಹಾಯವಾಗಲಿದ್ದು, ಇದರಿಂದ ಒಟ್ಟು 3,07 ಲಕ್ಷ ಬಿಪಿಎಲ್‌ದಾರರು ಹಾಗೂ 2436 ಎ.ಪಿ.ಎಲ್‌ದಾರರಿಗೆ ಸಹಾಯವಾಗಲಿದೆ. ಇದಕ್ಕಾಗಿ 24 ಕೋಟಿ ನಿಯೋಜಿಸಲಾಗಿದೆ.
- ನಗರ ಪ್ರದೇಶಗಳ ಕಾರ್ಮಿಕರು ಮತ್ತು ಬಡವರು ಆಹಾರವಿಲ್ಲದೆ ಬಳಲಬಾರದು ಎಂದು ಇಂದಿರಾ ಕ್ಯಾಂಟೀನ್ ಮೂಲಕ ಸರ್ಕಾರ ಉಚಿತವಾಗಿ ಊಟದ ವ್ಯವಸ್ಥೆ ಮಾಡಿದ್ದು ನಗರ ಪ್ರದೇಶಗಳಲ್ಲಿ 6 ಲಕ್ಷಕ್ಕೂ ಅಧಿಕ ಫಲಾನುಭವಿಗಳಿಗೆ ಸಹಾಯವಾಗುತ್ತಿದೆ. ಸುಮಾರು 25 ಕೋಟಿ ರೂ. ಖರ್ಚಾಗುತ್ತದೆ.
- ಕೋವಿಡ್ ಸೋಂಕಿತರಿಗೆ ಸರ್ಕಾರ ನಿಯೋಜಿತ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದ್ದು, ಕೋವಿಡ್ ಒಂದನೇ ಅಲೆಯ ನಂತರ ಇದುವರೆಗೆ 2.6 ಲಕ್ಷ ಸೋಂಕಿತರಿಗೆ ಚಿಕಿತ್ಸೆ ನೀಡಲಾಗಿದ್ದು, ಸುಮಾರು 956 ಕೋಟಿಗೂ ಹೆಚ್ಚು ಖರ್ಚು ಸರ್ಕಾರಕ್ಕಾಗಿದೆ.
- ಕೋವಿಡ್ ನಿರ್ವಹಣೆಗಾಗಿ ಹಣವನ್ನು ಪ್ರತಿ ಗ್ರಾಮ ಪಂಚಾಯತಿಗಳಿಗೆ 50 ಸಾವಿರದಂತೆ ಮುಂಗಡವಾಗಿ ನೀಡಲಾಗುತ್ತಿದ್ದು, ಇದರಿಂದ 6 ಸಾವಿರ ಗ್ರಾಮ ಪಂಚಾಯತ್ ಗಳಿಗೆ ಉಪಯೋಗ.
- ಕೋವಿಡ್ ರೋಗಿಗಳಿಗೆ ಅನುಕೂಲವಾಗಲು 2 ಸಾವಿರಕ್ಕೂ ಅಧಿಕ ವೈದ್ಯರನ್ನು 3 ದಿನಗಳ ಒಳಗಾಗಿ ನೇಮಕ ಮಾಡಲು ತೀರ್ಮಾನಿಸಿದೆ.
- ವಿದ್ಯುತ್ ಲೈನ್ ಮೆನ್‌ಗಳು, ಶಿಕ್ಷಕರು, ಗ್ಯಾಸ್ ಸಿಲಿಂಡರ್ ವಿತರಣೆದಾರರು ಮುಂಚೂಣಿ ಕಾರ್ಯಕರ್ತರೆಂದು ಪರಿಗಣಿಸಿ ಆದ್ಯತೆ ಮೇರೆಗೆ ಲಸಿಕೆ ನೀಡಲು ಕ್ರಮ ಕೈಗೊಳ್ಳುತ್ತೇವೆ.
- ಗ್ರಾಮ ಪಂಚಾಯತ್ ಮಟ್ಟದಲ್ಲಿ 10 ಕ್ಕೂ ಹೆಚ್ಚು ಕೋವಿಡ್ ರೋಗಿಗಳಿದ್ದರೆ ಅಲ್ಲಿ ಪರಾಮರ್ಶಿಸಲು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಗ್ರಾಮ ಪಂಚಾಯತ್ ಮುಖ್ಯಸ್ಥರ ಜೊತೆ ವಿಡಿಯೊ ಸಂವಾದ ಮಾಡಿ ಜಾಗೃತಿ ಮೂಡಿಸುವ ಪ್ರಯತ್ನ.

ಕೋವಿಡ್ ಪರಿಣಾಕಾರಿ ನಿರ್ವಹಣೆಗೆ ಆಸ್ಪತ್ರೆಗಳನ್ನು ಬಲಪಡಿಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

### ಸಾಲ ಪಡೆದವರಿಗೆ ಮುಖ್ಯ ಮಾಹಿತಿ :

## 3 ತಿಂಗಳು ಸ್ತ್ರೀಶಕ್ತಿ ಸಾಲ, ಕೃಷಿ ಸಾಲ ಮರುಪಾವತಿ ಅವಧಿ ವಿಸ್ತರಣೆಗೆ ಮನವಿ



**ಬೆಂಗಳೂರು** : ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆ ಕಾರಣದಿಂದ ಲಾಕ್‌ಡೌನ್ ಜಾರಿ ಮಾಡಲಾಗಿದೆ. ಹೀಗಾಗಿ ಸಾಲದ ಕಂತು ಪಾವತಿ ವಿನಾಯಿತಿ ನೀಡಬೇಕು. ಸಾಲಪಾವತಿ ಅವಧಿ ಮುಂದೂಡಬೇಕು ಎಂಬ ಒತ್ತಾಯ ಕೇಳಿ ಬಂದಿದೆ.

ಸ್ತ್ರೀಶಕ್ತಿ ಸಂಘಗಳ ಸದಸ್ಯರು ಸಾಲದ ಕಂತು ಪಾವತಿಸಲು ಮೂರು ತಿಂಗಳು ಮುಂದೂಡಿಕೆ ಮಾಡಬೇಕೆಂದು ಒತ್ತಾಯಿಸಿದ್ದಾರೆ. ಲಾಕ್‌ಡೌನ್ ಜಾರಿ ಮಾಡಿರುವುದರಿಂದ ಜೀವನ ನಿರ್ವಹಣೆ ಕಷ್ಟವಾಗಿದೆ. ಹೀಗಾಗಿ ಸಾಲದ ಕಂತು ಪಾವತಿಸಲು ಸಾಧ್ಯವಾಗದ ಕಾರಣ ಮೂರು ತಿಂಗಳು ಸಾಲದ ಕಂತಿನ ಪಾವತಿ ಅವಧಿ ಮುಂದೂಡಿಕೆ ಮಾಡಬೇಕೆಂದು ಸ್ತ್ರೀಶಕ್ತಿ ಸಂಘಗಳ ಮಹಿಳೆಯರು ಆಗ್ರಹಿಸಿದ್ದಾರೆ.

ಇನ್ನು ರೈತರ ಅಲ್ಪಾವಧಿ, ಮಧ್ಯಮಾವಧಿ, ದೀರ್ಘಾವಧಿ ಕೃಷಿ ಸಾಲ ಮರುಪಾವತಿ ಅವಧಿ ವಿಸ್ತರಣೆಗೆ ಸಂಬಂಧಿಸಿದಂತ ಮಾಹಿತಿ ಕೋರಿ ಚಿಕ್ಕಮಗಳೂರು ಸಹಕಾರ ಸಂಘಗಳ ನಿಬಂಧಕರ ಕಚೇರಿಯಿಂದ ಅಪೆಕ್ಸ್ ಬ್ಯಾಂಕ್‌ಗೆ ಪತ್ರ ಬರೆಯಲಾಗಿದೆ. ರೈತರಿಗೆ ಬೆಳೆ ಸಾಲ ಪಾವತಿಸಲು ತೊಂದರೆಯಾಗುತ್ತಿದೆ. ನಿಗದಿತ ಅವಧಿಯಲ್ಲಿ ಸಾಲ ಕಟ್ಟದಿದ್ದರೆ ಪೂರ್ಣ ಪ್ರಮಾಣದ ಬಡ್ಡಿ ಪಾವತಿಸಬೇಕಿದೆ. ಈ ಕಾರಣದಿಂದ ರೈತರು ಸಾಲ ಮರುಪಾವತಿ ಅವಧಿ ಮುಂದೂಡುವಂತೆ ಮನವಿ ಮಾಡಿದ್ದು, ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಬೆಳ್ಳಿ ಪ್ರಕಾಶ್ ಅವರೂ ಈ ಕುರಿತು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಸರ್ಕಾರ ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಿದ್ದು, ಬೆಳೆಸಾಲ, ಸ್ತ್ರೀ ಶಕ್ತಿ ಸಂಘಗಳ ಸಾಲ ಮರುಪಾವತಿ ಅವಧಿ ವಿಸ್ತರಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

# ಶುಭ ಸುದ್ದಿ : ಡಿಆರ್‌ಡಿಒ ತಯಾರಿಸಿದ ಕೋವಿಡ್ ಔಷಧ ಬಳಕೆಗೆ ಲಭ್ಯ

**ಹೊಸದಿಲ್ಲಿ** : ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಒ) ಅಭಿವೃದ್ಧಿ ಪಡಿಸಿರುವ ವೈರಸ್ ನಿಗ್ರಹ ಔಷಧವನ್ನು ಬಿಡುಗಡೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ರಾಜಧಾನಿ ದೆಹಲಿಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸುಮಾರು 10 ಸಾವಿರ ಡೋಸ್‌ಗಳನ್ನು ವಿವಿಧ ಆಸ್ಪತ್ರೆಗಳಿಗೆ ಹಂಚಿಕೆ ಮಾಡಲಿದ್ದಾರೆ.

2–ಡಿಯೊಕ್ಸಿ–ಡಿ–ಗ್ಲುಕೋಸ್ ಅಥವಾ 2–ಡಿಜಿ ಎಂದು ಕರೆಯಲಾಗುವ ಔಷಧವನ್ನು ಹೈದರಾಬಾದ್ ಮೂಲದ ಔಷಧ ದಿಗ್ಗಜ ಡಾ.ರೆಡ್ಡೀಸ್ ಲ್ಯಾಬೊರೇಟರೀಸ್ ಜತೆಗೂಡಿ ಡಿಆರ್‌ಡಿಒ ಲ್ಯಾಬ್‌ನಲ್ಲಿ ಅಭಿವೃದ್ಧಿಪಡಿಸಲಾಗಿದೆ. ಈ ಔಷಧವನ್ನು ತುರ್ತು ಬಳಕೆಗಾಗಿ ದೇಶದ ಪ್ರಮುಖ ಔಷಧ ನಿಯಂತ್ರಕ ಸಂಸ್ಥೆ ಡ್ರಗ್ಸ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ (ಡಿಸಿಜಿಐ) ಅನುಮೋದನೆ ನೀಡಿತ್ತು.

2–ಡಿಜಿ ತನ್ನ 2 ಮತ್ತು 3ನೇ ಹಂತಗಳ ಕ್ಲಿನಿಕಲ್ ಪ್ರಯೋಗಗಳಲ್ಲಿ ವಿಶ್ವಾಸಾರ್ಹ ಫಲಿತಾಂಶವನ್ನು ನೀಡಿತ್ತು. ಕಳೆದ ಮೇ ಹಾಗೂ ಅಕ್ಟೋಬರ್ ತಿಂಗಳ ನಡುವೆ ನಡೆದ




2ನೇ ಹಂತದ ಪ್ರಯೋಗದಲ್ಲಿ 19 ರೋಗಿಗಳಿಗೆ ಈ ಔಷಧ ಸುರಕ್ಷಿತವಾಗಿದೆ ಎನ್ನುವುದು ದೃಢಪಟ್ಟಿತ್ತು. ರೋಗಿಗಳ ಆಸ್ಪತ್ರೆ ವಾಸವನ್ನು ತಗ್ಗಿಸುವುದರಲ್ಲಿ ಮತ್ತು ಹೆಚ್ಚುವರಿ ಆಕ್ಸಿಜನ್ ಅವಲಂಬನೆ ತಗ್ಗಿಸುವುದರಲ್ಲಿ ಪರಿಣಾಮಕಾರಿ ಎನ್ನುವುದು ಕೂಡ ಸಾಬೀತಾಗಿತ್ತು. ಔಷಧದಲ್ಲಿನ ಹುಸಿ ಗ್ಲುಕೋಸ್ ಅಣುವಿನ ಮಾದರಿಯು ವೈರಸ್‌ತನ್ನ ಪಥದಲ್ಲಿ ಸಾಗುವುದನ್ನು ತಡೆಯುತ್ತದೆ ಎಂದು ಪರಿಣತರು ಹೇಳಿದ್ದಾರೆ. ಈ ಔಷಧವು ಪೌಡರ್ ರೂಪದಲ್ಲಿದ್ದು, ನೀರಿನೊಂದಿಗೆ ತೆಗೆದುಕೊಳ್ಳಬಹುದಾಗಿದೆ.

ಕೋವಿಡ್ ಚಿಕಿತ್ಸೆಗೆಂದೇ ವಿಶಿಷ್ಟವಾಗಿ ವಿನ್ಯಾಸಗೊಳಿಸಲಾಗಿರುವ ಜಗತ್ತಿನ ಕೆಲವೇ ಔಷಧಗಳಲ್ಲಿ 2–ಡಿಜಿ ಒಂದು. ಆದರೆ, ಇದರಿಂದ ಕೋವಿಡ್ ಗುಣಮುಖವಾಗುವುದು ಖಚಿತವಾಗಿಲ್ಲ. ರೆಮ್‌ಡೆಸಿವಿರ್, ಐವರ್ಮೆಕ್ಟಿನ್, ಪ್ಲಾಸ್ಮಾ ಥೆರಪಿ, ಕೆಲವು ಸ್ಟೀರಾಯ್ಡ್‌ಗಳನ್ನು ಕೋವಿಡ್ ಚಿಕಿತ್ಸೆಗೆ ಪ್ರಯೋಗಾತ್ಮಕವಾಗಿ ಬಳಸಿಕೊಳ್ಳಲಾಗುತ್ತಿದೆ.

## ಕೊರೊನಾಗೆ ಡಿಆರ್‌ಡಿಒ ಬ್ರಹ್ಮಾಸ್ತ್ರ...!

## 2–ಡಿಜಿ ಔಷಧ ಎಷ್ಟು ಪರಿಣಾಮಕಾರಿ...?






ದೇಶಾದ್ಯಂತ ಹರಡಿರುವ ತನ್ನ 53ಕ್ಕೂ ಹೆಚ್ಚಿನ ಪ್ರಯೋಗ ಶಾಲೆಗಳ ಮೂಲಕ 'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ'ಯು (ಡಿ.ಆರ್.ಡಿ.ಒ.) ವಿಜ್ಞಾನ–ತಂತ್ರಜ್ಞಾನದ ಮುಂಚೂಣಿ ವಿಷಯಗಳಿಗೆ ಸಂಬಂಧಿಸಿದ ಪ್ರಯೋಗಗಳಲ್ಲಿ ಭಾಗಿಯಾಗಿದೆ. ದೆಹಲಿಯಲ್ಲಿರುವ 'ಇನ್‌ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯರ್ ಮೆಡಿಸಿನ್ ಅಂಡ್ ಅಲೈಡ್ ಸೈನ್ಸಸ್' (ಇನ್‌ಮಾಸ್) ಎಂಬ ಡಿ.ಆರ್.ಡಿ.ಒ. ಪ್ರಯೋಗ ಶಾಲೆಯಲ್ಲಿ ಪರಮಾಣು ಬಾಂಬ್ ಸ್ಫೋಟ ಅಥವಾ ಪರಮಾಣು ಸ್ಥಾವರಗಳಲ್ಲಿನ ಅಪಘಾತಗಳ ಸಂದರ್ಭದಲ್ಲಿ ಬೇಕಾದ ಅಗತ್ಯ ಔಷಧಗಳನ್ನು ಸಂಸ್ಕರಿಸಲಾಗುತ್ತದೆ. ಹಾಗೆಯೇ ವಿಕಿರಣ (ರೇಡಿಯೇಶನ್) ಆಘಾತಗಳನ್ನು ತಡೆಗಟ್ಟಬಲ್ಲ, ತತ್ಸಂಬಂಧಿ ಕ್ಯಾನ್ಸರ್ ಅನ್ನು ತಡೆಗಟ್ಟಬಲ್ಲ ಔಷಧಗಳನ್ನು ಸಹಾ ಈ ಪ್ರಯೋಗಶಾಲೆ ತಯಾರಿಸುತ್ತದೆ.

ಬಹಳ ಹಿಂದೆಯೇ 'ಇನ್‌ಮಾಸ್' ಪ್ರಯೋಗಶಾಲೆಯು 2–ಡಿಜಿ (2–ಡಿಆಕ್ಸಿ–ಡಿ–ಗ್ಲುಕೋಸ್) ಎಂಬ ಗ್ಲುಕೋಸ್ ಅನ್ನು ಸಂಸ್ಕರಣೆ ಮಾಡಿತ್ತು. 2004ರಲ್ಲಿ ಡಾ.ರೆಡ್ಡೀಸ್ ಲ್ಯಾಬೊರೇಟರಿ ಎಂಬ ಖಾಸಗಿ ತಯಾರಿಕಾ ಕಂಪನಿಗೆ ಈ ತಂತ್ರಜ್ಞಾನವನ್ನು ಅದು ವರ್ಗಾವಣೆ ಮಾಡಿತ್ತು.


ಇದನ್ನು ಕ್ಯಾನ್ಸರ್ ಕೋಶಗಳ ಬೆಳವಣಿಗೆಯನ್ನು ತಡೆಗಟ್ಟಲು ಪ್ರಯೋಗಾರ್ಥವಾಗಿ ಕೆಲವು ಆಸ್ಪತ್ರೆಗಳಲ್ಲಿ ಬಳಸಲಾಗುತ್ತಿತ್ತು. ನಂತರದ ದಿನಗಳಲ್ಲಿ 'ಹರ್ಪಿಸ್' (ಸರ್ಪಸುತ್ತು) ನಂತಹ ವೈರಸ್ ಸೋಂಕಿಗೂ ಇದನ್ನು ಬಳಸಿ, ವೈರಸ್ ಭರಿತ ಕೋಶಗಳ ಬೆಳವಣಿಗೆಯನ್ನು ತಡೆಗಟ್ಟುವ ಪ್ರಯತ್ನಗಳು ನಡೆದಿದ್ದವು.


ಕಳೆದ ವರ್ಷದ ಏಪ್ರಿಲ್‌ನಲ್ಲಿ ಕೋವಿಡ್–19ರ ಮೊದಲ ಅಲೆಯಿದ್ದಾಗ, ಈ ಔಷಧವನ್ನು ಪ್ರಯೋಗ ಮಾಡುವ ಬಗ್ಗೆ ಪರಿಶೀಲಿಸಲಾಯಿತು. ಕೊರೋನಾ ವೈರಸ್‌ನ ಉತ್ಪತ್ತಿಯ ಮೇಲೆ ಆರಂಭಿಕ ಹಂತದಲ್ಲೇ ಈ ಔಷಧವು ಕಡಿವಾಣ ಹಾಕುವುದು ಪತ್ತೆಯಾಯಿತು. ನಂತರ ಔಷಧ ನಿಯಂತ್ರಕರ ಪರವಾನಗಿ ಪಡೆದು ಕಳೆದ ವರ್ಷದ ಮೇ ತಿಂಗಳಿನಿಂದ ಅಕ್ಟೋಬರ್‌ವರೆಗೆ ಆಸ್ಪತ್ರೆಗಳಲ್ಲಿ ಸಾಧಾರಣದಿಂದ ಗಂಭೀರ ಪರಿಸ್ಥಿತಿಯಲ್ಲಿರುವ ಅನೇಕ ಸೋಂಕಿತರ ಮೇಲೆ ಔಷಧವನ್ನು ಪ್ರಯೋಗಿಸಲಾಯಿತು. 65 ವರ್ಷ ಮೇಲ್ಪಟ್ಟವರ ಮೇಲೆ ಈ ಔಷಧವನ್ನು ಪ್ರಯೋಗಿಸಿದಾಗ, ಅವರಲ್ಲಿ ಉಸಿರಾಟದ ತೊಂದರೆಗಳು ಕಡಿಮೆಯಾಗಿ, ಆಕ್ಸಿಜನ್ ಅವಲಂಬನೆಯಿಂದ ಅವರನ್ನು ಬಿಡುಗಡೆ ಮಾಡಿತ್ತು. ಈ ಯಶಸ್ಸಿನಿಂದ ಉತ್ತೇಜಿತರಾಗಿರುವ ವಿಜ್ಞಾನಿಗಳು ಭಾರತದ ಡ್ರಗ್ ಕಂಟ್ರೋಲರ್ ಜನರಲ್ ಅವರಿಂದ ಔಷಧದ ಮೂರನೆಯ ಹಂತದ ಪರಿಶೀಲನೆಗೆ ಅನುಮತಿಯನ್ನು ಪಡೆದರು.



ಸುಧೀಂದ್ರ ಹಾಲ್ದೊಡ್ಡೇರಿ






ಆಸ್ಪತ್ರೆಯ ನಿಯಂತ್ರಿತ ವಾತಾವರಣದ ಮೂರನೆಯ ಹಂತದ ಪರಿಶೀಲನೆಯಲ್ಲಿ ಪ್ರತಿಶತ 51ಕ್ಕೂ ಹೆಚ್ಚು ಸೋಂಕಿತರು ಔಷಧ ಸೇವಿಸಿದ ಮೂರು ದಿನಗಳೊಳಗೆ ಚೇತರಿಸಿಕೊಂಡರು. ಉಳಿದವರು 5 ರಿಂದ 7 ದಿನಗಳೊಳಗೆ ಚೈತನ್ಯ ಪಡೆದುಕೊಂಡರು. ವಿವಿಧ ವಯೋಮಾನದ ಸಾಮಾನ್ಯ ಹಾಗೂ ಗಂಭೀರ ಪ್ರಮಾಣದ ಕೋವಿಡ್–19 ಸೋಂಕಿತರ ಮೇಲೆ ಔಷಧದ ಪ್ರಭಾವವನ್ನು ಸದ್ಯಕ್ಕೆ ಪರಿಶೀಲಿಸಲಾಗುತ್ತಿದೆ. ಇದುವರೆಗಿನ ಔಷಧ ಪ್ರಯೋಗಗಳಲ್ಲಿ ಭಾಗಿಯಾದ ಎಲ್ಲ ಸೋಂಕಿತರೂ ವೈರಸ್ ಬಾಧೆಯಿಂದ ಸಂಪೂರ್ಣವಾಗಿ ಮುಕ್ತರಾಗಿದ್ದಾರೆ.

ನೀರಿನಲ್ಲಿ ಬೆರೆಸಿ ಈ ಔಷಧವನ್ನು ಗ್ಲುಕೋಸ್‌ನಂತೆ ರೋಗಿಗಳಿಗೆ ನೀಡಬಹುದು. ಕುಡಿದ ತಕ್ಷಣವೇ ಅದು ದೇಹವಿಡೀ ಪಸರಿಸುತ್ತದೆ. ವೈರಸ್ ಸೋಂಕಿತ ಕೋಶಗಳನ್ನು ಸೇರಿದೊಡನೆ, ಅಲ್ಲಿ ವೈರಸ್‌ಗಳ ಸಂಯೋಜನೆಯನ್ನು ತಡೆಗಟ್ಟುವ ಪ್ರಯತ್ನ ಮಾಡುತ್ತದೆ. ಅಲ್ಲಿರುವ ಪ್ರೋಟೀನ್‌ನ ಶಕ್ತಿ ಉತ್ಪಾದನೆಗೆ ಧಕ್ಕೆ ಮಾಡುವುದರ ಮೂಲಕ ವೈರಸ್‌ಗಳ ವೃದ್ಧಿಗೆ ತಡೆಹಾಕುತ್ತದೆ. ಈ ಔಷಧವು ಶ್ವಾಸಕೋಶದಲ್ಲಿನ ವೈರಸ್ ಸೋಂಕಿನ ಮೇಲೂ ಉತ್ತಮ ಪರಿಣಾಮ ಬೀರುತ್ತದೆ. ಆ ಮೂಲಕ ಸೋಂಕಿತರ ಉಸಿರಾಟದ ತೊಂದರೆಯನ್ನು ಶಮನಗೊಳಿಸುತ್ತದೆ.

ಇದರ ಸಂಸ್ಕರಣೆಗೆ ಅಗತ್ಯ ತಂತ್ರಜ್ಞಾನ, ಮೂಲದ್ರವ್ಯಗಳು ದೇಶದಲ್ಲೇ ಲಭ್ಯವಿದೆ. ಮೊದಲ ಹಂತಗಳ ಪ್ರಯೋಗಗಳು ಯಶಸ್ವಿಯಾಗಿದ್ದು, ಡ್ರಗ್ ಕಂಟ್ರೋಲರ್ ಜನರಲ್ ಅನುಮತಿ ಸಿಕ್ಕಿದೆ. ಮೇ 17, ಸೋಮವಾರದಂದು ಅಧಿಕೃತವಾಗಿ ಈ ಔಷಧವನ್ನು ಸಾರ್ವಜನಿಕ ಬಳಕೆಗೆ ಕೇಂದ್ರ ರಕ್ಷಣಾ ಸಚಿವರು ಬಿಡುಗಡೆ ಮಾಡಿದ್ದಾರೆ.

ಈ ಔಷಧದಿಂದಾಗಿ ಆಕ್ಸಿಜನ್ ಅವಲಂಬಿತ ಕೋವಿಡ್–19 ಸೋಂಕಿತರ ಸಂಖ್ಯೆಯು ಗಣನೀಯವಾಗಿ ಇಳಿಯುವ ನಿರೀಕ್ಷೆಯಿದೆ.

## ಸೂಚನೆ

ಆಡಳಿತಾತ್ಮಕ ಕಾರಣಗಳಿಂದ ಮೇ–2021ರ ಸಹಕಾರ ವಾರ್ತಾಪತ್ರಿಕೆ ಸಂಚಿಕೆಯನ್ನು ಮುದ್ರಣ ಮಾಡಲಾಗಿರುವುದಿಲ್ಲ. ಈ ಸಂಚಿಕೆಯನ್ನು www.ksccsf.org ನಲ್ಲಿ ಅಪ್‌ಲೋಡ್ ಮಾಡಲಾಗಿರುತ್ತದೆ.



# ಮಠಾಧೀಶರಿಂದ ಸಿಕ್ಕಿತ್ತು ಚಾಲನೆ

ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧಿಪತಿಗಳಾದ ಡಾ॥ ನಿರ್ಮಲಾನಂದನಾಥ ಸ್ವಾಮೀಜಿರವರು ಹಾಗೂ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸಾಮೀಜಿಗಳು ಮೈಸೂರಿನ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಚಿತ್ರದುರ್ಗದ ಮುರುಘ ಶರಣರು, ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ್ ಗುರೂಜಿ ಅವರುಗಳು ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಭೇಟಿ ನೀಡಿ ಕೋವಿಡ್ 19 ನಿಂದ ಮೃತಪಟ್ಟ ಕುಟುಂಬಗಳಿಗೆ ಸ್ಥಳೀಯ ಶಾಸಕರು ಹಾಗೂ ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ರವರು ವೈಯುಕ್ತಿಕವಾಗಿ ನೀಡುತ್ತಿರುವ ತಲಾ ರೂ.1 ಲಕ್ಷಗಳ ಪರಿಹಾರಧನ ಕಾರ್ಯಕ್ರಮಕ್ಕೆ ಈಗಾಗಲೇ ಚಾಲನೆ ನೀಡಿದ್ದಾರೆ.







## ಅವಧಿ ವಿಸ್ತರಣೆ

ಕೋವಿಡ್–19 ಎರಡನೆಯ ಅಲೆಯ ಕಾರಣದಿಂದಾಗಿ ಸಹಕಾರ ಸಂಸ್ಥೆಗಳಿಗೆ ಸರ್ಕಾರದ ಯೋಜನೆಗಳಲ್ಲಿ ರೈತರು/ಸದಸ್ಯರು ದಿನಾಂಕ : 01.04.2021ರಿಂದ ದಿನಾಂಕ : 30.06.2021ರವರೆಗೆ ಗಡುವು ಬರುವ ಸಾಲ/ಕಂತುಗಳನ್ನು ಮರುಪಾವತಿಸಲು ದಿನಾಂಕ : 30.06.2021ರವರೆಗೆ ಸರ್ಕಾರ ಅವಕಾಶ ಕಲ್ಪಿಸಿ ಅವಧಿ ವಿಸ್ತರಣೆ ಮಾಡಿದೆ.

## ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮತ್ತು ರಾಜ್ಯ ಸಹಕಾರ ಬ್ಯಾಂಕ್ ವಿಲೀನಕ್ಕೆ ಮಾರ್ಗಸೂಚಿ

**ಮುಂಬೈ :** ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳನ್ನು (ಡಿಸಿಸಿಬಿ) ರಾಜ್ಯ ಸಹಕಾರಿ ಬ್ಯಾಂಕ್‌ಗಳ (ಎಸ್‌ಟಿಸಿಬಿ) ಜೊತೆ ವಿಲೀನ ಮಾಡುವ ಪ್ರಸ್ತಾವಗಳನ್ನು ಕೆಲವು ಷರತ್ತುಗಳಿಗೆ ಅನುಗುಣವಾಗಿ ಪರಿಗಣಿಸುವುದಾಗಿ ಆರ್‌ಬಿಐ ಕಳೆದವಾರ ಹೇಳಿದೆ. ವಿಲೀನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಪ್ರಸ್ತಾವನೆ ಬರಬೇಕು ಎಂಬುದು ಷರತ್ತುಗಳ ಪೈಕಿ ಒಂದು.

ಎಸ್‌ಟಿಸಿಬಿ ಮತ್ತು ಡಿಸಿಸಿಬಿ ವಿಲೀನಕ್ಕೆ ಆರ್‌ಬಿಐ ಅನುಮೋದನೆ ಬೇಕು. ವಿಲೀನಕ್ಕೆ ಅನುಮತಿ ನೀಡಬೇಕು ಎಂದು ಕೋರಿ ಕೆಲವು ರಾಜ್ಯ ಸರ್ಕಾರಗಳು ಆರ್‌ಬಿಐ ಬಾಗಿಲು ತಟ್ಟಿದ್ದವು. ಈಗ ಆರ್‌ಬಿಐ ಈ ವಿಚಾರಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿ ಸಿದ್ಧಪಡಿಸಿದೆ.

ವಿಲೀನಗೊಂಡ ನಂತರ ಬ್ಯಾಂಕ್‌ಗೆ ಹೆಚ್ಚುವರಿ ಬಂಡವಾಳ ನೀಡಲು ಕಾರ್ಯತಂತ್ರ ಅಗತ್ಯವಿದ್ದರೆ ಹಣಕಾಸಿನ ನೆರವು ನೀಡುವ ಭರವಸೆ, ಲಾಭ ಆಗುವ ರೀತಿಯಲ್ಲಿ ವಹಿವಾಟು ನಡೆಸುವ ಯೋಜನೆ, ಬ್ಯಾಂಕ್‌ನ ಆಡಳಿತದ ಕುರಿತು ವಿವರಣೆಯನ್ನೂ ಪ್ರಸ್ತಾವದ ಜೊತೆಯಲ್ಲಿ ಆರ್‌ಬಿಐಗೆ ನೀಡಬೇಕಾಗುತ್ತದೆ. ರಾಜ್ಯ ಸರ್ಕಾರ ಸಿದ್ಧಪಡಿಸುವ ಪ್ರಸ್ತಾವನೆಯನ್ನು ನಬಾರ್ಡ್ ಪರಿಶೀಲಿಸಬೇಕು, ಆ ಪ್ರಸ್ತಾವನೆಯನ್ನು ಅನುಮೋದಿಸಬೇಕು. ವಿಲೀನಕ್ಕೆ ಅಗತ್ಯ ಸಂಖ್ಯೆಯ ಷೇರುದಾರರ ಒಪ್ಪಿಗೆ ಸಿಗಬೇಕು. ವಿಲೀನದ ಪ್ರಸ್ತಾವನೆಯನ್ನು ಆರ್‌ಬಿಐ, ನಬಾರ್ಡ್ ಜೊತೆ ಸಮಾಲೋಚಿಸಿ ಪರಿಶೀಲಿಸುತ್ತದೆ ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

## ಬೇಡಿಕೆ ಹೆಚ್ಚಳ, ಹೂಡಿಕೆ ಇದ್ದರೆ ಬೆಳವಣಿಗೆ : ಆರ್‌ಬಿಐ

**ನವದೆಹಲಿ :** ಸಾಂಕ್ರಾಮಿಕದ ಅಲೆಯು ತಗ್ಗಿದ ನಂತರದಲ್ಲಿ ಆರ್ಥಿಕ ಬೆಳವಣಿಗೆ ಸುಸ್ಥಿರ ಆಗಬೇಕು ಎಂದಾದರೆ ಮಾರುಕಟ್ಟೆಯಲ್ಲಿ ಸಾರ್ವಜನಿಕರಿಂದ ಬೇಡಿಕೆ ಹೆಚ್ಚಾಗಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ. 2020–21ನೇ ಹಣಕಾಸು ವರ್ಷವು ಆರ್ಥಿಕತೆಗೆ ಗಾಯ ಮಾಡಿದೆ. ಕೋವಿಡ್‌ನ ಎರಡನೆಯ ಅಲೆಯ ಕಾರಣದಿಂದಾಗಿ, ಹಾಲಿ ಆರ್ಥಿಕ ವರ್ಷದಲ್ಲಿ (2021–22) ದೇಶದ ಜಿಡಿಪಿ ಎಷ್ಟು ಬೆಳವಣಿಗೆ ಸಾಧಿಸಬಹುದು ಎಂಬ ಅಂದಾಜನ್ನು ಪರಿಷ್ಕರಿಸಲಾಗುತ್ತಿದೆ. ಬೆಳವಣಿಗೆಯು ಶೇ.10.5ರಷ್ಟು ಇರಬಹುದು ಎಂಬುದು ನಮ್ಮ ಅಂದಾಜು. ಇತರರು ಕೂಡ ಈಗ ಈ ಅಂದಾಜಿಗೆ ಸಹಮತ ಸೂಚಿಸುವಂತೆ ಕಾಣುತ್ತಿದೆ' ಎಂದು ಆರ್‌ಬಿಐ ತನ್ನ ವಾರ್ಷಿಕ ವರದಿಯಲ್ಲಿ ಹೇಳಿದೆ.

ಬಿಕ್ಕಟ್ಟಿನ ನಂತರದ ಸಂದರ್ಭದಲ್ಲಿ ಆರ್ಥಿಕ ಪುನಶ್ಚೇತನವು ಸಾಮಾನ್ಯವಾಗಿ ಹೂಡಿಕೆಗಿಂತಲೂ ಮಿಗಿಲಾಗಿ ಬೇಡಿಕೆ ಹೆಚ್ಚಳದ ಮೂಲಕ ಆಗುತ್ತದೆ. ಆದರೆ, ಹೂಡಿಕೆ ಹೆಚ್ಚಳದ ಮೂಲಕ ಆಗುವ ಆರ್ಥಿಕ ಪುನಶ್ಚೇತನವು ಹೆಚ್ಚು ಸುಸ್ಥಿರವಾಗಿರುತ್ತದೆ, ಬೇಡಿಕೆಯನ್ನು ಹೆಚ್ಚಿಸುತ್ತದೆ ಹಾಗೂ ಉದ್ಯೋಗ ಸೃಷ್ಟಿಗೆ ಕಾರಣವಾಗುತ್ತದೆ ಎಂದು ವರದಿಯಲ್ಲಿ ಹೇಳಲಾಗಿದೆ.

**ಸಾಲದ ಮೇಲೆ ಕಣ್ಣಿಡಿ :** ಮರುಪಾವತಿ ಆಗುತ್ತಿಲ್ಲದ ಸಾಲದ ಮೇಲೆ ಒಂದು ಕಣ್ಣು ಇಡುವಂತೆ, ಎನ್‌ಪಿಎ ಆಗಬಹುದಾದ ಸಾಲಗಳಿಗಾಗಿ ಅಗತ್ಯ ಪ್ರಮಾಣದಲ್ಲಿ ಬಂಡವಾಳ ಮೀಸಲಿಡುವಂತೆ ಆರ್‌ಬಿಐ, ಬ್ಯಾಂಕ್‌ಗಳಿಗೆ ಸೂಚನೆ ನೀಡಿದೆ. ಆದರೆ, ಬ್ಯಾಂಕ್‌ಗಳ ಬಳಿ ಹೆಚ್ಚು ಬಂಡವಾಳ ಇರುವುದರಿಂದ, ಸಾಲದ ವಸೂಲಿ ಸುಧಾರಿಸುತ್ತಿರುವುದರಿಂದ ಹಾಗೂ ಬ್ಯಾಂಕ್‌ಗಳು ಲಾಭದ ಹಳಿಗೆ ಮರಳಿರುವುದರಿಂದ ಹಣಕಾಸಿನ ಒತ್ತಡಗಳನ್ನು ಉತ್ತಮವಾಗಿ ನಿಭಾಯಿಸುವ ಸ್ಥಿತಿಯಲ್ಲಿ ಅವು ಇವೆ ಎಂದು ಆರ್‌ಬಿಐ ವಿಶ್ವಾಸ ವ್ಯಕ್ತಪಡಿಸಿದೆ.

**ಹೆಚ್ಚಿದ ನೋಟು ಚಲಾವಣೆ :** 2020–21ರಲ್ಲಿ ಬ್ಯಾಂಕ್ ನೋಟುಗಳ ಚಲಾವಣೆಯು ಸರಾಸರಿ ಪ್ರಮಾಣಕ್ಕಿಂತ ಜಾಸ್ತಿ ಆಗಿತ್ತು ಎಂಬ ಅಂಶವು ವರದಿಯಲ್ಲಿ ಇದೆ. ಸಾಂಕ್ರಾಮಿಕದ ಕಾರಣದಿಂದಾಗಿ ಜನ ಮುನ್ನೆಚ್ಚರಿಕೆಯಿಂದ ನಗದನ್ನು ತಮ್ಮ ಬಳಿ ಹೆಚ್ಚಿನ ಪ್ರಮಾಣದಲ್ಲಿ ಇರಿಸಿಕೊಳ್ಳುತ್ತಿದ್ದುದು ಇದಕ್ಕೆ ಕಾರಣ ಎಂದು ಅದು ಹೇಳಿದೆ.

# ಪ್ರಗತಿ ಪಥದಲ್ಲಿ ಬೆಂಗಳೂರಿನ ಶ್ರೀ ಮಂಜುನಾಥೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ದೇಶದಲ್ಲಿ ಸಹಕಾರ ಚಳವಳಿಯ ಉಗಮದಿಂದ ಆರ್ಥಿಕವಾಗಿ ಅಬಲರಾದವರ ಆರ್ಥಿಕ ವಿಕಾಸ, ಜೀವನ ಮಟ್ಟದಲ್ಲಿ ಸುಧಾರಣೆ, ಲೇವಾದೇವಿಯವರ ಶೋಷಣೆಯಿಂದ ಮುಕ್ತಿ ಇವೆಲ್ಲವೂ ಸಾಧ್ಯವಾಗುತ್ತಿದೆ. ಸಹಕಾರ ತತ್ವಗಳಲ್ಲಿ ನಂಬಿಕೆ, ವಿಶ್ವಾಸವಿರಿಸಿ ಸಮಾನ ಮನಸ್ಕಜನರಿಂದ ಪ್ರಾರಂಭವಾದ ಸಂಘಗಳು ಸದಸ್ಯರ ಆರ್ಥಿಕ ಬಲವರ್ಧನೆಗೆ ಕಾರಣೀಭೂತವಾಗಿವೆ. ಇಂಥ ಸಹಕಾರ ಸಂಘಗಳಲ್ಲಿ ಬೆಂಗಳೂರು ನಂದಿನಿ ಬಡಾವಣೆಯ ಶ್ರೀ ಮಂಜುನಾಥೇಶ್ವರ ಪತ್ತಿನ ಸಹಕಾರ ಸಂಘವೂ ಒಂದು.

**ಸಂಘದ ಸ್ಥಾಪನೆ ಮತ್ತು ಬೆಳವಣಿಗೆ :** ಮುತ್ಸದ್ದಿಗಳೂ, ಕ್ರೀಯಾಶೀಲರೂ ಆದ ಶ್ರೀ ಎಂ.ರಾಮಯ್ಯರವರ ನೇತೃತ್ವದಲ್ಲಿ ಯಶವಂತಪುರ ಲಾರಿ ಮಾಲೀಕರ ಸಂಘದ ಸದಸ್ಯರುಗಳ ಸಹಕಾರದಿಂದ ಸಂಘವು ದಿನಾಂಕ : 15/10/2000 ರಂದು 1016 ಸದಸ್ಯರಿಂದ 13.00 ಲಕ್ಷ ಷೇರು ಬಂಡವಾಳ ಸಂಗ್ರಹಿಸುವ ಮೂಲಕ ಸಂಘವು ಅಧೀಕೃತವಾಗಿ ತನ್ನ ಕಾರ್ಯಚಟುವಟಿಕೆಗಳನ್ನು ತನ್ನ ಸ್ವಂತಕಟ್ಟಡದಲ್ಲಿ ಆರಂಭಿಸಿತು. ಪ್ರಸ್ತುತ ದಿನಾಂಕ:31/03/2021 ಕ್ಕೆ ಸಂಘದಲ್ಲಿಒಟ್ಟು 2,578 ಸದಸ್ಯರನ್ನೊಳಗೊಂಡು ರೂ.1,77,87,900/- ಷೇರು ಬಂಡವಾಳ ಕ್ರೋಡೀಕರಿಸಿದೆ. ಸಂಘವು ನೆಲಮಂಗಲ ಹಾಗು ಯಲಹಂಕದ ಅಟ್ಟೂರಿನಲ್ಲಿ ಶಾಖೆಗಳನ್ನು ಹೊಂದಿದ್ದು, ನೆಲಮಂಗಲದಲ್ಲಿ 30x45 ಅಳತೆಯ ನಿವೇಶನದಲ್ಲಿ 40 ಚದರ ಕಟ್ಟಡ ನಿರ್ಮಾಣ ಮಾಡಿ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅಟ್ಟೂರು ಶಾಖೆಗೂ ಸಹ ಸ್ವಂತ ನಿವೇಶನ ಖರೀದಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಸಂಘವು ಸದಸ್ಯರಿಂದ ಷೇರು ಬಂಡವಾಳ, ವಿವಿಧರೀತಿಯ ಠೇವಣಿಗಳನ್ನು ಸಂಗ್ರಹಿಸಿ, ಸಾಲ ಸೌಲಭ್ಯ ನೀಡುವ ವ್ಯವಸ್ಥೆ ಹೊಂದಿರುತ್ತದೆ, ಖಾಯಂ ಠೇವಣಿ, ನಗದುಠೇವಣಿ, ಪಿಗ್ಮಿಠೇವಣಿ, ಆವರ್ತಕ ಠೇವಣಿ ಹಾಗು ಉಳಿತಾಯ ಠೇವಣಿಗಳನ್ನು ಸಂಗ್ರಹಿಸುತ್ತಾ ತನ್ನ ನಿಧಿಗಳನ್ನು ಹೆಚ್ಚಿಸಿಕೊಳ್ಳುತ್ತಿದೆ. ಇತರೆ ವಾಣಿಜ್ಯ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಗಿಂತ ಸ್ಪರ್ಧಾತ್ಮಕ ಹಾಗೂ ಆಕರ್ಷಕ ಬಡ್ಡಿದರದಲ್ಲಿ ಠೇವಣಿದಾರರಿಗೆ ಸೌಲಭ್ಯ ಒದಗಿಸುತ್ತಿದೆ.

**ಸಾಲ ಮತ್ತು ಮುಂಗಡಗಳು :** ಸಂಘವು ಸಾಲ ವಿತರಣೆ ಮಾಡುವಾಗ ಸದಸ್ಯರಿಗೆ ಅವರ ಆರ್ಥಿಕ ಮಟ್ಟವನ್ನು ಸುಧಾರಿಸಿ ಸದಸ್ಯರು ಶ್ರೆಯೋಭಿವೃದ್ಧಿ ಹೊಂದಲು ಸಾಲ ನೀಡುತ್ತಿದೆ ಹಾಗೂ ಸಾಲ ಮರುಪಾವತಿ ಬಗೆಗೆಯೂ ಅರಿವು ಮೂಡಿಸುತ್ತಿದೆ. ಸ್ಥಿರಾಸ್ತಿ ಆಧಾರಿತ ಸಾಲ, ಹಳೇ ಮತ್ತು ಹೊಸ ವಾಹನ ಸಾಲ, ಜಾಮೀನು ಸಾಲ,




ಚಿನ್ನಾಭರಣ ಸಾಲ, ಠೇವಣಿ ಆಧಾರಿತ ಸಾಲ ವಿತರಿಸುತ್ತಿದ್ದು ಪ್ರಸ್ತುತ ಸಂಘವು ವರ್ಷದಿಂದ ವರ್ಷಕ್ಕೆ ಸದೃಡವಾಗಿ ಬೆಳೆಯುತ್ತ ತನ್ನೆಲ್ಲ ಕಾರ್ಯಚಟುವಟಿಕೆಗಳನ್ನು ಬಹುವಿಸ್ತಾರವಾಗಿ ತೆರೆದುಕೊಂಡು ಪ್ರತಿ ವರ್ಷವು ಸಂಘವು ಲಾಭಗಳಿಸುತ್ತಾ ಪ್ರಗತಿಯ ಪಥದಲ್ಲಿ ಸಾಗುತ್ತಿದೆ.

ಸಂಘವು ಸಹಕಾರ ತತ್ವಗಳಲ್ಲಿ ಒಂದಾದ ಸಾಮಾಜಿಕ ಕಳಕಳಿಯನ್ನು ಹೊಂದಿದ್ದು ಪ್ರತಿ ವರ್ಷ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಾ ಬಂದಿರುತ್ತದೆ ಜೊತೆಗೆ ಸದಸ್ಯರು ಮರಣ ಹೊಂದಿದಾಗ ಮೃತರ ನಾಮಿನಿಗೆ ರೂ.10,000/- ಮರಣೋತ್ತರ ಪರಿಹಾರವನ್ನು ನೀಡುತ್ತ ಬಂದಿದೆ.

ಸಂಘದ ಕಾರ್ಯಚಟುವಟಿಕೆಗಳನ್ನು ಮೆಚ್ಚಿ ದಿನಾಂಕ 14/11/2015ರಂದು ಮೈಸೂರಿನಲ್ಲಿ ನಡೆದ 62ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ "ಉತ್ತಮ ಸಹಕಾರ ಸಂಘ ಪ್ರಶಸ್ತಿ"ಹಾಗು ಸಂಘದ ಅಧ್ಯಕ್ಷರಿಗೆ 2014ರಲ್ಲಿ ಬೆಂಗಳೂರಿನಲ್ಲಿ ನಡೆದ ಸಹಕಾರ ಸಪ್ತಾಹ ಹಾಗೂ 2018ರಲ್ಲಿ ಕಾಗಿನೆಲೆಯಲ್ಲಿ ನಡೆದ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ "ಉತ್ತಮ ಸಹಕಾರಿ ಪ್ರಶಸ್ತಿ" ಹಾಗು ದಿನಾಂಕ 15/11/2019ರಂದು ಕೊಪ್ಪಳದಲ್ಲಿ ನಡೆದ 66ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು

# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

ಲೇಖನ : **ಬಸವೇಗೌಡ,** ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು

.... ಕಳೆದ ಸಂಚಿಕೆಯಿಂದ

**ಅಖಿಲ ಭಾರತ ಗ್ರಾಮೀಣ ಪತ್ತಿನ ಪರಿಶೀಲನಾ ಸಮಿತಿ (All-India Rural Credit Review Committee) (1969) :**

ಈ ಸಮಿತಿಯನ್ನು ಆರ್‌ಬಿಐ 1966ರಲ್ಲಿ ಶ್ರೀ ಬಿ.ವೆಂಕಟಪ್ಪಯ್ಯ ಇವರ ಅಧ್ಯಕ್ಷತೆಯಲ್ಲಿ ನೇಮಿಸಿತು. ಗ್ರಾಮೀಣ ಸಾಲಗಳನ್ನು ಒದಗಿಸುತ್ತಿರುವ ಬಗ್ಗೆ ಪರಿಶೀಲಿಸಿ, ಕೃಷಿ ಚಟುವಟಿಕೆಗಳನ್ನು ತೀವ್ರಗೊಳಿಸುವುದಕ್ಕಾಗಿ ಅಧ್ಯಯನ ಮಾಡಿ ಶಿಫಾರಸ್ಸುಗಳನ್ನು ಮಾಡಬೇಕೆಂದು ನೇಮಿಸಲಾಗಿರುತ್ತದೆ. ಈ ಸಮಿತಿಯು 1969ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಸಮಿತಿಯ ಮುಖ್ಯ ಶಿಫಾರಸ್ಸುಗಳು ಈ ಕೆಳಕಂಡಂತಿವೆ.

**1. ಪ್ರಾಥಮಿಕ ಕೃಷಿ ಪತ್ತಿನ ಸಂಘಗಳ ಆರ್ಥಿಕ ಸಾಧ್ಯತೆಯ ಅವಶ್ಯಕತೆ :**

ಕೃಷಿ ಸಾಲಗಳನ್ನು ನೀಡುವ ಪ್ರಾಥಮಿಕ ಹಂತದ ವ್ಯವಸ್ಥೆಯು ಆರ್ಥಿಕ ಸಾಧ್ಯತೆ ಹೊಂದಿರಬೇಕು, ಈ ದಿಸೆಯಲ್ಲಿ ಸಂಘಗಳ ಪುನರ್ ಸಂಘಟನಾ ಯೋಜನೆಯನ್ನು ಅನುಷ್ಠಾನಗೊಳಿಸಿ 1970–71ರ ವೇಳೆಗೆ ಆರ್ಥಿಕ ಸಾಧ್ಯತೆ ಹೊಂದಿರುವ ಹಾಗೂ ಸಾಧ್ಯತೆ ಇರುವ ಸಂಘಗಳು ಮಾತ್ರ ಇರುವಂತೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಶಿಫಾರಸ್ಸು ಮಾಡಿರುತ್ತದೆ. ಅಲ್ಲದೆ, ಈ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ಠೇವಣಿ ಸ್ವೀಕರಿಸುವ ಮತ್ತು ಬ್ಯಾಂಕಿಂಗ್ ಸೇವೆಯನ್ನು ಒದಗಿಸುವ ಕೆಲಸ ಮಾಡಬೇಕೆಂದು ಶಿಫಾರಸ್ಸು ಮಾಡಿದೆ. ಜಿಲ್ಲಾ ಕೇಂದ್ರ ಬ್ಯಾಂಕ್‌ಗಳನ್ನು ಪುನಶ್ಚೇತಗೊಳಿಸಬೇಕೆಂದು ಹಾಗೂ ರಾಜ್ಯ ಸಹಕಾರಿ ಬ್ಯಾಂಕ್‌ಗಳು ಪ್ರಮುಖ ಪಾತ್ರ ವಹಿಸಬೇಕೆಂದು ಸಮಿತಿ ಸಲಹೆ ನೀಡಿರುತ್ತದೆ.

**2. ಸಾಲದ ನೀತಿ ಮತ್ತು ಪ್ರಕ್ರಿಯೆಗಳು :** ಸಾಲದ ನೀತಿಯನ್ನು ರೂಪಿಸಿ, ಸರಳ ಪ್ರಕ್ರಿಯೆಯ ಮೂಲಕ ವಿಳಂಬವಿಲ್ಲದೆ ಸಾಲಗಳನ್ನು ರೈತರಿಗೆ ನೀಡಬೇಕೆಂದು ಶಿಫಾರಸ್ಸು ಮಾಡಿರುತ್ತದೆ. ನಗದು ಸಾಲದ ಸೌಲಭ್ಯವನ್ನು ಆಯ್ದ ರೈತರುಗಳಿಗೆ ನೀಡಬೇಕೆಂದು ಸಹ ಶಿಫಾರಸ್ಸು ಮಾಡಿದೆ.

**3. ಸಣ್ಣ ರೈತರ ಅಭಿವೃದ್ಧಿ ಪ್ರಾಧಿಕಾರ (Small Farmers Development Agenecy) :** ಸಣ್ಣ ರೈತರ ಆರ್ಥಿಕ–ಸಾಮಾಜಿಕ ಅಭಿವೃದ್ಧಿಗಾಗಿ ಹಾಗೂ ಉತ್ಪಾದನೆಯ ಹೆಚ್ಚಳದ ದೃಷ್ಟಿಯಿಂದ ಸಣ್ಣ ರೈತರ ಅಭಿವೃದ್ಧಿ ಏಜೆನ್ಸಿಯನ್ನು ಸ್ಥಾಪಿಸಬೇಕೆಂದು ಶಿಫಾರಸ್ಸು ಮಾಡಿದೆ. ಬೇರೆ ಬೇರೆ ರಾಜ್ಯಗಳ ಒಟ್ಟು 30 ಜಿಲ್ಲೆಗಳಲ್ಲಿ ಈ ಏಜೆನ್ಸಿಯನ್ನು ಸ್ಥಾಪಿಸಿ ಸಣ್ಣ ರೈತರಿಗೆ ಅಗತ್ಯ ಸಾಲ ಮತ್ತು ಕೃಷಿ ಪರಿಕರಗಳನ್ನು ಒದಗಿಸಲು ಶಿಫಾರಸ್ಸು ಮಾಡಿರುತ್ತದೆ.

**4. ಹೂಡಿಕೆಗೆ ಹಣಕಾಸು ನೀಡಲು ಅವಧಿ ಸಾಲ (Term Loan for Financing Investment) :** ಕೃಷಿ ಕ್ಷೇತ್ರದಲ್ಲಿ ಆರೋಗ್ಯಕರ ಹಣಕಾಸು ಹೂಡಿಕೆಗಾಗಿ ಅವಧಿ ಸಾಲಗಳನ್ನು ನೀಡಬೇಕೆಂದು ಹಾಗೂ ಭೂ ಅಭಿವೃದ್ಧಿ ಬ್ಯಾಂಕ್‌ಗಳು ಸಾಲದ ನೀತಿ ಮತ್ತು ಪ್ರಕ್ರಿಯೆಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕೆಂದು ಶಿಫಾರಸ್ಸು ಮಾಡಿದೆ. ಯೋಜನೆಗಳ ತಾಂತ್ರಿಕ ಮತ್ತು ಆರ್ಥಿಕ ಸಾಧ್ಯತೆಗಳನ್ನು ಆಧರಿಸಿ ಮತ್ತು ಮೇಲ್ವಿಚಾರಣೆ ಒಳಗೊಂಡಂತೆ ಕೃಷಿ ವಿನಿಯೋಗ ಅವಧಿ ಸಾಲಗಳನ್ನು ರೈತರಿಗೆ ನೀಡಬೇಕೆಂದು ಶಿಫಾರಸ್ಸು ಮಾಡಿದೆ. ಅಲ್ಲದೆ, ಈ ವಿಷಯದಲ್ಲಿ ಕೃಷಿ ಪುನರ್ಧನ ಕಾರ್ಪೋರೇಷನ್ (Agricultural Re-finance Corporation) ಆರ್.ಬಿ.ಐನ ಕೃಷಿ ಪತ್ತಿನ ಶಾಖೆ (Agricultural Credit Department) ಯೊಡನೆ ಕೂಡಿ ದೀರ್ಘಾವಧಿ ಕೃಷಿ ಪತ್ತಿನ ಸಂಘಗಳ ಮಾರ್ಗದರ್ಶಕ ಹಾಗೂ ಹಣಕಾಸು ಸಂಸ್ಥೆಯ ಪಾತ್ರವನ್ನು ನಿರ್ವಹಿಸಬೇಕೆಂದು ಸಮಿತಿಯು ಸಲಹೆ ನೀಡಿರುತ್ತದೆ.

**5. ಗ್ರಾಮೀಣ ವಿದ್ಯುತ್ತೀಕರಣ ಕಾರ್ಪೋರೇಷನ್ (Rural Electrification Corporation) :** ಕೃಷಿ ಕ್ಷೇತ್ರದಲ್ಲಿ ಸಾಲದ ವಿನಿಯೋಗ ಮಾಡಲು ಹಾಗೂ ಅಂದಾಜಿಸಿರುವ ಹೆಚ್ಚುವರಿ 12.5 ಲಕ್ಷ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡಲು ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಲೈನ್‌ಗಳನ್ನು ವಿಸ್ತರಿಸಲು ವಿದ್ಯುತ್ ಮಂಡಳಿಗಳು ಸಂಪನ್ಮೂಲಗಳನ್ನು ಕ್ರೋಡಿಕರಿಸಿಕೊಳ್ಳಬೇಕಾಗಿದೆ. ಈ ಅವಶ್ಯಕತೆಯನ್ನು ಅನುಷ್ಠಾನಗೊಳಿಸಲು ಗ್ರಾಮೀಣ ವಿದ್ಯುತ್ತೀಕರಣ ಕಾರ್ಪೋರೇಷನ್‌ನ್ನು ಸರ್ಕಾರದ ಆರ್ಥಿಕ ನೆರವಿನಿಂದ ಸ್ಥಾಪಿಸಬೇಕೆಂದು ಶಿಫಾರಸ್ಸು ಮಾಡಿದೆ.

**6. ಹೈನುಗಾರಿಕೆಗಾಗಿ ಸಾಲದ ಸೌಲಭ್ಯಗಳು :** ಹೈನುಗಾರಿಕೆ ಮತ್ತು ಮೀನುಗಾರಿಕೆ ಇತ್ಯಾದಿ ಪೂರಕ ಕ್ಷೇತ್ರಗಳಿಗೆ ಸಾಲಗಳನ್ನು ಒದಗಿಸಲು ಆರ್.ಬಿ.ಐ ಪ್ರಮುಖ ಪಾತ್ರ ವಹಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

**7. ನೇಮಕಾತಿ :** ಅರ್ಹ ಸಿಬ್ಬಂದಿಯ ನೇಮಕಾತಿಗಾಗಿ, ಸೂಕ್ತ ಹುದ್ದೆಗಳ ಸೃಷ್ಟಿಗೆ ಆದ್ಯತೆ ನೀಡಬೇಕೆಂದು ಶಿಫಾರಸ್ಸು ಮಾಡಿದೆ. ಹಾಗೆಯೇ ಚುನಾಯಿತ ಆಡಳಿತ ವರ್ಗದ ಮತ್ತು ಕಾರ್ಯ ನಿರ್ವಾಹಕರು ಹಾಗೂ ವ್ಯವಸ್ಥಾಪನ ಸಿಬ್ಬಂದಿಯ ಅಧಿಕಾರಗಳ ಬಗ್ಗೆ ಮತ್ತು ಜವಾಬ್ದಾರಿಗಳ ಬಗ್ಗೆ ಸ್ಪಷ್ಟತೆ ಇರಬೇಕೆಂದು ಸಹ ಸಲಹೆ ನೀಡಿದೆ. ಸಹಕಾರ ಸಂಘಗಳ ಅಭಿವೃದ್ಧಿಗೆ ಮತ್ತು ಕೃಷಿ ಸಾಲ ನೀಡಿಕೆಯನ್ನು ತೀವ್ರಗೊಳಿಸುವುದಕ್ಕೆ ಆರ್.ಬಿ.ಐ ಪ್ರಮುಖ ಪಾತ್ರ ವಹಿಸಬೇಕೆಂದು ಸಮಿತಿಯು ಅಭಿಪ್ರಾಯ ಪಟ್ಟಿರುತ್ತದೆ. ನಾಲ್ಕನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಸುಸ್ತಿ ಸಾಲಗಳು ಜಾಸ್ತಿ ಇದ್ದುದರಿಂದ ಕೃಷಿ ಸಾಲ ವಿತರಣೆಯು ನಿರೀಕ್ಷಿತ ಪ್ರಗತಿ ಸಾಧಿಸಲಿಲ್ಲ. ಮಾರಾಟ ಕ್ಷೇತ್ರದಲ್ಲಿ ಒಳ್ಳೆಯ ಪ್ರಗತಿ ಕಂಡಿತು. ಗ್ರಾಹಕ ಸಂಘಗಳ ಅನಿಯಂತ್ರಿತ (Non-controlled) ಪದಾರ್ಥಗಳ ವಿತರಣೆಯು ಶೇ.50 ರಷ್ಟನ್ನು ತಲುಪಿತು.

**ಐದನೇ ಪಂಚವಾರ್ಷಿಕ ಯೋಜನೆ (1974–79) :** ಐದನೇ

ಪಂಚವಾರ್ಷಿಕ ಯೋಜನೆಯ ರಾಷ್ಟ್ರೀಯ ಕಾರ್ಯ ನೀತಿಯು ರೈತರ, ಕೆಲಸಗಾರರ ಮತ್ತು ಗ್ರಾಹಕರ ಅಗತ್ಯತೆಗಳಿಗೆ ವಿಶೇಷ ಒತ್ತು ನೀಡಿ ಸದೃಡ ಮತ್ತು ಆರ್ಥಿಕ ಸಾಧ್ಯತೆಯುಳ್ಳ ಸಹಕಾರ ಕ್ಷೇತ್ರದ ನಿರ್ಮಾಣದ ಗುರಿಯಾಗಿರುತ್ತದೆ. ಈ ಯೋಜನೆಯ ನಿರ್ದಿಷ್ಟ ಧ್ಯೇಯೋದ್ದೇಶಗಳೆಂದರೆ–1) ಕೃಷಿ ಮತ್ತು ಕೃಷಿ ಸಂಬಂಧಿತ ಸಹಕಾರ ಸಂಸ್ಥೆಗಳನ್ನು ಬಲಗೊಳಿಸುವುದು, 2) ಸಹಕಾರ ಗ್ರಾಹಕರ ವ್ಯವಸ್ಥೆಯನ್ನು ಬಲಗೊಳಿಸಿ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುವಂತೆ ಮಾಡುವುದು, 3) ಸಹಕಾರ ಅಭಿವೃದ್ಧಿಯಲ್ಲಿ ಪ್ರಾಂತೀಯ ಅಸಮಾನತೆಯನ್ನು ಹೋಗಲಾಡಿಸುವುದು, ಮತ್ತು 4) ಸಣ್ಣ ಮತ್ತು ಅತಿ ಸಣ್ಣ ರೈತರು ಹಾಗೂ ಇತರೆ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಸಹಕಾರ ಸಂಸ್ಥೆಗಳ ಮೂಲಕ ವಿಶೇಷ ಪ್ರಯತ್ನಗಳನ್ನು ಮಾಡುವುದು ಹಾಗೂ ಸೇವೆಗಳನ್ನು ಒದಗಿಸುವುದು. ಈ ಯೋಜನಾ ಅವಧಿಯಲ್ಲಿ ಕೃಷಿ ಸಾಲ ನೀಡಿಕೆ, ಕೃಷಿ ಉತ್ಪನ್ನಗಳ ಮಾರಾಟ, ಸಂಸ್ಕರಣಾ ಸಹಕಾರ ಸಂಘಗಳ ಸ್ಥಾಪನೆ, ರಾಸಾಯನಿಕ ಗೊಬ್ಬರ ಮಾರಾಟ/ಉತ್ಪಾದನೆ, ಸಹಕಾರ ಉಗ್ರಾಣ ಸಂಗ್ರಹಣಾ ವ್ಯವಸ್ಥೆ, ಗ್ರಾಹಕ ವಸ್ತುಗಳ ಮಾರಾಟ ಇತ್ಯಾದಿಗಳ ಬಗ್ಗೆ ನಿರ್ದಿಷ್ಟ ಗುರಿಗಳನ್ನು ಹಾಕಿಕೊಂಡು ಅದನ್ನು ಸಾಧಿಸಲು ಕ್ರಮವಿಡಲಾಯಿತು. ಈ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿ ಸಾಲ ನೀಡಿಕೆಯಲ್ಲಿ ಸಹಕಾರ ಸಂಸ್ಥೆಗಳನ್ನು ಪ್ರಮುಖ ಸಾಂಸ್ಥಿಕ ಏಜೆನ್ಸಿಯಾಗಿ ಮುಂದುವರೆಸಲಾಯಿತು. ಹೊಸ ಚಿಂತನೆಯಾದ ರೈತ ಸೇವಾ ಸಂಘಗಳ (FSS's) ಸ್ಥಾಪನೆಯನ್ನು ರಾಷ್ಟ್ರೀಯ ಕೃಷಿ ಆಯೋಗ ಅಂಗೀಕರಿಸಿದ್ದರ ಆಧಾರದ ಮೇಲೆ ಅವುಗಳ ಸ್ಥಾಪನೆಗೆ ಉತ್ತೇಜಿಸಲಾಯಿತು. ಕೃಷಿ ಸಾಲ ವಿತರಣೆಯಲ್ಲಿ, ಒಟ್ಟು ಸದಸ್ಯತ್ವದಲ್ಲಿ ಶೇ.37 ಸಾಲ ಪಡೆದ ಸದಸ್ಯರಿದ್ದು, ಶೇ.45ರಷ್ಟು ಗ್ರಾಮೀಣ ಕುಟುಂಬಗಳು ಈ ಯೋಜನಾ ಅವಧಿಯಲ್ಲಿ ಸಹಕಾರ ಚಳುವಳಿಯ ವ್ಯಾಪ್ತಿಗೆ ಒಳಪಟ್ಟವು.

ಸಣ್ಣ ಮತ್ತು ಅತಿ ಸಣ್ಣ ರೈತರ ಅಭಿವೃದ್ದಿಗೆ ವಿಶೇಷ ಸಾಲ ಸೌಲಭ್ಯಗಳು, ಸಹಕಾರ ಕೃಷಿ ಮಾರಾಟ ಚಟುವಟಿಕೆಗಳ ಅಭಿವೃದ್ಧಿ, ಸಹಕಾರ ಸಂಸ್ಕರಣ – ಸಕ್ಕರೆ ಉತ್ಪಾದನೆ, ಸ್ಪಿನಿಂಗ್ ಮಿಲ್, ಅಕ್ಕಿ ಗಿರಣಿ, ಎಣ್ಣೆ ಗಿರಣಿ, ದಾಲ್ ಮಿಲ್, ಇತ್ಯಾದಿ ಸಹಕಾರ ಘಟಕಗಳ ಸ್ಥಾಪನೆ ಮತ್ತು ಅವುಗಳಿಗೆ ಉತ್ತೇಜನ, ಕೃಷಿ ಪರಿಕರಗಳ ವಿತರಣೆ, ಗ್ರಾಹಕ ವಸ್ತುಗಳ ವಿತರಣೆ, ಶಿಕ್ಷಣ ಮತ್ತು ತರಬೇತಿ, ಅಂತರ್ ರಾಜ್ಯ ಅಸಮಾನತೆ ನಿವಾರಣೆಗೆ ಕ್ರಮಗಳು, ಇತ್ಯಾದಿ ಆದ್ಯತೆ ಪಡೆದಂತವುಗಳಾಗಿರುತ್ತದೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಆಗಿದ್ದ ವೆಚ್ಚ ರೂ.258 ಕೋಟಿ ಹಾಗೂ ಐದನೇ ಪಂಚವಾರ್ಷಿಕ ಯೋಜನೆಯ ಒಟ್ಟು ಬಂಡವಾಳವು ಸಹಕಾರ ಅಭಿವೃದ್ಧಿ ಸಂಬಂಧಿಸಿದಂತೆ ರೂ.423 ಕೋಟಿಗಳನ್ನು ತೆಗೆದಿರಿಸಲಾಯಿತು.

ಮುಂದುವರೆಯುವುದು...

..11ನೇ ಪುಟದಿಂದ

ಸ್ಮರಿಸಿ "ಉತ್ತಮ ಸಹಕಾರ ಸಂಘ" ಪ್ರಶಸ್ತಿ ನೀಡಿ ಗೌರವಿಸಿದೆ.

ಈ ಎಲ್ಲಾ ಪ್ರಶಂಸೆಗೆ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗು ಆಡಳಿತ ಮಂಡಳಿಯವರ ನಿಸ್ವಾರ್ಥ ಸೇವೆ ಮತ್ತುದಕ್ಷ, ಪ್ರಾಮಾಣಿಕ ಸಿಬ್ಬಂದಿ ವರ್ಗವು ಸಹ ಕಾರಣ ಎಂದರೆ ತಪ್ಪಾಗಲಾರದು, ಅಲ್ಲದೆ ಸಂಘದಅಧ್ಯಕ್ಷರಾದ ಶ್ರೀ ಎಂ.ರಾಮಯ್ಯರವರು ಸಂಘದ ದಿನ ನಿತ್ಯದ ವ್ಯವಹಾರದ ಮೇಲಿರುವ ಕಾಳಜಿ ಮೆಚ್ಚುವಂತದ್ದು, ಸಂಘವು ಇನ್ನೂಎತ್ತರಕ್ಕೆ ಬೆಳದು ತನ್ನ ಪ್ರಾಮಾಣಿಕ ಸೇವೆಯಿಂದ ಸಮಾಜದಜನರಿಗೆ ಒಳಿತಾಗಲಿ ಮತ್ತುಎಲ್ಲರ ವಿಶ್ವಾಸಗಳಿಸಲಿ ಎಂದು ಹೃದಯಾಂತರಾಳದಿಂದ ಹಾರೈಸೋಣ.

**ಆಡಳಿತ ಮಂಡಳಿ ಸದಸ್ಯರು**



ಶ್ರೀ ಎಂ.ರಾಮಯ್ಯ
ಅಧ್ಯಕ್ಷರು



ಶ್ರೀ ಚನ್ನಕೇಶವಮೂರ್ತಿ
ಉಪಾಧ್ಯಕ್ಷರು



ಶ್ರೀ ಎನ್.ಎ.ಪ್ರಕಾಶ್
ಕಾರ್ಯದರ್ಶಿ

**ನಿರ್ದೇಶಕರುಗಳು**

1) ಶ್ರೀ ಬೆಟ್ಟಯ್ಯ ಜಿ.ಡಿ.
2) ಶ್ರೀ ಸತೀಶ್ ಬಿ.ಎ.
3) ಶ್ರೀ ರಂಗಪ್ಪ ಜಿ.ಆರ್.
4) ಶ್ರೀ ಕೃಷ್ಣಮೂರ್ತಿ ಟಿ.ಆರ್.
5) ಶ್ರೀ ನಾಗೇಶ್ ಬಿ.
6) ಶ್ರೀ ವೆಂಕಟರಮಣ ಎಂ.
7) ಶ್ರೀ ಚೆಲುವರಾಜು ಎಂ.
8) ಶ್ರೀ ನಾರಾಯಣ ಎನ್.
9) ಶ್ರೀಮತಿ ಶೋಭ ಆರ್.
10) ಶ್ರೀಮತಿ ಬಿಂದು ಬಿ.ಕೆ.
11) ಕುಮಾರಿ ಸುಷ್ಮಿತ ಆರ್.

**ಸಂಘದ ಪ್ರಗತಿಯ ಅಂಕಿ ಅಂಶಗಳು**

| ವಿವರಗಳು | 2000 | 2010 | 2021 (ತಾತ್ಕಲಿಕ) |
|---|---|---|---|
| ಸದಸ್ಯರು | 1016 | 1668 | 2578 |
| ಷೇರು ಬಂಡವಾಳ | 20,16,600 | 54,08,100 | 1,77,87,900 |
| ಠೇವಣಿಗಳು | 15,44,462 | 1,32,97,261 | 32,62,58,493 |
| ಇತರೆ ನಿಧಿಗಳು | 4,22,000 | 40,50,236 | 3,85,40,522 |
| ದುಡಿಯುವ ಬಂಡವಾಳ | 39,83,062 | 2,41,57,458 | 39,78,92,222 |
| ಸಾಲಗಳು | 29,44,270 | 1,74,83,320 | 34,51,36,474 |
| ನಿವ್ವಳ ಲಾಭ | 1,03,090 | 12,24,436 | 1,02,50,000 |
| ಡಿವಿಡೆಂಡ್ | – | 12% | (2020) 15% |
| ಆಡಿಟ್ ವರ್ಗ | " ಬಿ " | " ಬಿ " | " ಎ " |



# ಸಹಕಾರ ಸಂಸ್ಥೆಗಳಲ್ಲಿ ಲೆಕ್ಕಪರಿಶೋಧನೆ ಮತ್ತು ಪರಿವೀಕ್ಷಣೆಯಲ್ಲಿ ಆಸ್ತಿಗಳ ಪರಿಶೀಲನೆ – ಪ್ರಾಮುಖ್ಯತೆ

ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ)

**ಸಹಕಾರ ಸಂಸ್ಥೆಯ ಸಂಪನ್ಮೂಲಗಳು ಅದರ ಪಾವತಿಯಾದ ಷೇರುಬಂಡವಾಳ, ಕ್ರೋಢೀಕೃತ ನಿಧಿಗಳು, ಠೇವಣಾತಿಗಳು, ಪಡೆದ ಸಾಲಗಳು, ಹಂಚಿಕೆಯಾಗದ ಲಾಭಗಳು, ದೇಣಿಗೆಗಳು, ಕೊಡುಗೆಗಳು ಆಗಿರುತ್ತವೆ. ಇವುಗಳನ್ನು ತನ್ನ ಆಸ್ತಿಯಲ್ಲಿ (ಜಿಂದಗಿ) ತೊಡಗಿಸಿರುತ್ತದೆ. ನಗದು ಮತ್ತು ಬ್ಯಾಂಕ್ ಶಿಲ್ಕುಗಳು, ಹೂಡಿಕೆಗಳು, ಸಾಲಗಳು ಮತ್ತು ಮುಂಗಡಗಳು, ಚರ ಮತ್ತು ಸ್ಥಿರ ಆಸ್ತಿಗಳು.**
**ಈ ಆಸ್ತಿಗಳ ನೈಜ, ನಿಖರ ಪರಿಶೀಲನೆ ಆದಲ್ಲಿ ಸಂಪನ್ಮೂಲಗಳು (ಜವಾಬ್ದಾರಿಗಳು, ಸಾಲ) ಎಲ್ಲಿ, ಹೇಗೆ ತೊಡಗಿಸಲಾಗಿದೆ ಎಂಬುದು ಕಂಡು ಬರುತ್ತದೆ. ನಗದು ಪರಿಶೀಲನೆ ನಡೆಸಿ, ನಗದು ಇರುವುದನ್ನು ಖಾತ್ರಿಪಡಿಸಿಕೊಳ್ಳಬೇಕಾಗುತ್ತದೆ. ಬ್ಯಾಂಕಿನಲ್ಲಿನ ಶಿಲ್ಕು ಬಗ್ಗೆ ಬ್ಯಾಂಕಿನಿಂದ ದೃಢೀಕರಣ ಪಡೆದು ಖಚಿತ ಪಡಿಸಿಕೊಳ್ಳಬೇಕು. ಹೂಡಿಕೆಗಳ ಬಗ್ಗೆ ಇರುವ ದಾಖಲಾತಿಗಳು, ದೃಢೀಕರಣಗಳು ರಕ್ಷಣೆಗಳ ಸಂಬಂಧಿಸಿದ ಸಂಸ್ಥೆಗಳಿಂದ ಇವುಗಳ ಅಸಲಿಯತ್ತಿನ ಬಗ್ಗೆ ಖಚಿತಗೊಳಿಸಬೇಕು. ತಃಖ್ತೆಯಲ್ಲಿನ ಮೊತ್ತಕ್ಕೂ ದಾಖಲಾತಿಯಲ್ಲಿನ ಮೊತ್ತಕ್ಕೂ ತಾಳೆ ಇರಬೇಕಾಗುತ್ತದೆ. ಬೌಧಿಕ ಇರುವಿಕೆ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು.**

ಸಹಕಾರ ಸಂಘ/ಸಹಕಾರಿಗಳು ಆರ್ಥಿಕ ವರ್ಷ ಮುಗಿದ ಒಂದು ತಿಂಗಳು (ಏಪ್ರಿಲ್) ಒಳಗೆ ತನ್ನ ಅಂತಿಮ ಲೆಕ್ಕಗಳನ್ನು ಸಿದ್ದಪಡಿಸತಕ್ಕದ್ದು, ಶಾಸನಬದ್ಧ ಅಗತ್ಯತೆ. ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 63, ಸಹಕಾರ ಸಂಘಗಳ ನಿಯಮ 60ರ ಸಂ.29 ರಿಂದ 30ಎ ಮತ್ತು ಸಹಕಾರ ಸಂಘಗಳ ಅಧಿನಿಯಮ 1997 ಕಲಂ.33, ನಿಯಮ 2004 ಸಂ.8 ರಿಂದ 10ರವರೆಗೆ ಲೆಕ್ಕಪರಿಶೋಧನೆ ಮತ್ತು ವಿಧಿವಿಧಾನಗಳ ಬಗ್ಗೆ ತಿಳಿಯಪಡಿಸಲಾಗಿದೆ. ಇದು ಸಹಕಾರ ಸಂಸ್ಥೆಗಳ ಆಸ್ತಿಗಳ ಪರಿಶೀಲನೆಯನ್ನೂ ಒಳಗೊಂಡಿರುತ್ತದೆ. ಇದಕ್ಕೆ ಸಹಕಾರ ಬ್ಯಾಂಕ್‌ಗಳು ಹೊರತಾಗಿರುವುದಿಲ್ಲ. ಇತ್ತೀಚೆಗೆ ಸಹಕಾರ ಬ್ಯಾಂಕ್‌ಗಳಲ್ಲಿ ಆದ ಅನಾಹುತಗಳು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ತಿದ್ದುಪಡಿಗೆ ಕಾರಣವಾಗಿ ನಿಯಂತ್ರಣ ಬ್ಯಾಂಕ್ ಆದ ರಿಸರ್ವ್ ಬ್ಯಾಂಕ್ ಹೆಚ್ಚು ನಿಯಂತ್ರಣಗಳನ್ನು ಹೊರಿಸಲು ಸಾಧ್ಯವಾಗಿದೆ. ಈಗ ರಿಸರ್ವ್ ಬ್ಯಾಂಕ್ ಲೆಕ್ಕಪರಿಶೋಧನೆಗೂ ಕೆಲವು ಮಾನದಂಡಗಳನ್ನು ವಿಧಿಸಿರುತ್ತದೆ. (ಎಕನಾಮಿಕ್‌ಟೈಮ್ಸ್‌ನ ವರದಿ ದಿನಾಂಕ:28–4–2021) ಲೆಕ್ಕಪರಿಶೋಧಕರ ನೇಮಕಾತಿಗೆ ರಿಸರ್ವ್ ಬ್ಯಾಂಕ್‌ನ ಪೂರ್ವಾನುಮತಿ ಅಗತ್ಯ. ಆಸ್ತಿಯ ಗಾತ್ರ ರೂ.15,000 ಕೋಟಿ ಮೀರಿದ್ದಲ್ಲಿ ಎರಡು ಲೆಕ್ಕಪರಿಶೋಧಕರು (ಕಂಪನಿ)ಗಳು ಜಂಟಿಯಾಗಿ ಲೆಕ್ಕಪರಿಶೋಧನೆ ನಡೆಸುವುದು ಅಗತ್ಯವಾಗುತ್ತದೆ.



ಇದರ ಹಿನ್ನೆಲೆಯಲ್ಲಿ ಸಹಕಾರ ಸಂಸ್ಥೆಗಳು ಅತಿಯಾದ ನಿಯಂತ್ರಣಕ್ಕೆ ಒಳಪಡಲು ಕಾರಣಗಳೇನು ಎಂಬುದನ್ನು ವಿಶ್ಲೇಷಿಸಬೇಕಾಗಿದೆ. ಇದಕ್ಕೆ ಪ್ರಮುಖ ಕಾರಣ ಸಂಸ್ಥೆಗಳ ಚುಕ್ಕಾಣಿ ಹಿಡಿದಿರುವ ಆಡಳಿತ ಮಂಡಳಿಯ ವೈಫಲ್ಯ. ಆಡಳಿತ ಮಂಡಳಿ ತಮ್ಮ ಸಂಸ್ಥೆಯ ಆಗುಹೋಗುಗಳ ಬಗ್ಗೆ ಅಗತ್ಯ ಹಿಮ್ಮಾಹಿತಿ ಪಡೆಯದಿರುವುದು. ಸಕಾಲಿಕ ನಿರ್ಧಾರಗಳು, ಅಗತ್ಯ ಚಿಕಿತ್ಸಕ ಕ್ರಮಗಳನ್ನು ಕೈಗೊಳ್ಳದೇ ಇರುವುದು ಕಾರಣವಾಗಿರುತ್ತದೆ. ಕೆಲವು ಬಾರಿ ಬೇಲಿಯೇ ಎದ್ದು ಹೊಲ ಮೇಯುವ ಪರಿಸ್ಥಿತಿಯಾಗಿರುತ್ತದೆ. ಈ 'ಪರಿಸ್ಥಿತಿ'ಯು 'ಪರಿವೀಕ್ಷಣೆ'ಯಲ್ಲಾಗಲಿ 'ಲೆಕ್ಕಪರಿಶೋಧನೆ'ಯಲ್ಲಾಗಲಿ ಪ್ರತಿಫಲನಗೊಳ್ಳದೇ ಇರುವುದಕ್ಕೆ ಕಾರಣವಾದರೂ ಏನು? ಇದು 'ಅಗೋಚರ' ಪರಿಸ್ಥಿತಿಯಲ್ಲಿ ಹುದುಗಿದ್ದು'ಗೋಚರ'ವಾಗುವುದಾದರೂ ಯಾವಾಗ ಮತ್ತು ಹೇಗೆ? ಎಂಬುದನ್ನು ಪರಿಶೀಲಿಸಬೇಕಾಗಿದೆ.

ವ್ಯವಹಾರದ ಗಾತ್ರ ಅಧಿಕವಿದ್ದು ಲಾಭಗಳಿಕೆ ಕಡಿಮೆ ಇರುವುದು, ಲಾಭಗಳಿಸಿದ್ದರೂ ತನ್ನ ಜವಾಬ್ದಾರಿಗಳನ್ನು ತೀರಿಸುವಲ್ಲಿ ಸಂಕಷ್ಟ ಎದುರಿಸುತ್ತಿರುವುದು 'ಡಿವಿಡೆಂಡ್' ಹಂಚಿಕೆ ಮಾಡಲಾಗದಿರುವುದು ಠೇವಣಿದಾರರಿಗೆ ಸಕಾಲದಲ್ಲಿ ಠೇವಣಿ ಹಿಂತಿರುಗಿಸಲು ಸಾಧ್ಯವಾಗದಿರುವುದು, ಸಾಲಗಾರರಿಗೆ ಸಾಲ ಮರುಪಾವತಿಸಲು ಸಾಧ್ಯವಾಗದಿರುವುದು ವ್ಯವಹಾರಕ್ಕೆ ಬಂಡವಾಳದ ಕೊರತೆಯಾದಾಗ ಇಂತಹ ವಿಷಮ ಪರಿಸ್ಥಿತಿಗಳಲ್ಲಿ ಸಂಸ್ಥೆಯಲ್ಲಿ 'ಏನೋ, ಎಲ್ಲಿಯೋ ಲೋಪವಾಗಿದೆ' ಎಂಬುದು ಗೋಚರವಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಅಂತಿಮ ಲೆಕ್ಕಗಳ ತಯಾರಿಕೆಯಲ್ಲಿ ತಾಳ ಮೇಳವಿಲ್ಲದಾಗಲೂ ಗೋಚರವಾಗುತ್ತದೆ. ಬಹಳಷ್ಟು ಪ್ರಸಂಗಗಳಲ್ಲಿ 'ಕೊಟ್ಟವನು ಕೋಡಂಗಿ ಈಸಿಕೊಂಡವನು ಈರಭದ್ರ' ಆಗುತ್ತಾನೆ. ಅಲ್ಲದೆ 'ಹುಚ್ಚು ಮುಂಡೆ ಮದುವೇಲಿ ಉಂಡೋನೆ ಜಾಣ' ಎಂಬ ಗಾದೆಗಳು ಸಾರ್ಥಕತೆಯನ್ನು ಪಡೆಯುತ್ತವೆ. ಇದಕ್ಕೆ ಪರಿಹಾರವಾದರೂ ಏನು?

ಇದಕ್ಕೆ ಪರಿಹಾರವೇ 'ಪರಿವೀಕ್ಷಣೆ' ಮತ್ತು 'ಲೆಕ್ಕಪರಿಶೋಧನೆ'. ಅದರಲ್ಲಿಯೂ ಈ ಎರಡು ಕ್ರಿಯೆಗಳ ಸಂದರ್ಭದಲ್ಲಿ ಕೈಗೊಳ್ಳಬೇಕಾದ 'ಆಸ್ತಿಗಳ ಪರಿಶೀಲನೆ ಕಾರ್ಯ'.

ಸಹಕಾರ ಸಂಸ್ಥೆಯ ಸಂಪನ್ಮೂಲಗಳು ಅದರ ಪಾವತಿಯಾದ ಷೇರುಬಂಡವಾಳ, ಕ್ರೋಢೀಕೃತ ನಿಧಿಗಳು, ಠೇವಣಾತಿಗಳು, ಪಡೆದ ಸಾಲಗಳು, ಹಂಚಿಕೆಯಾಗದ ಲಾಭಗಳು, ದೇಣಿಗೆಗಳು, ಕೊಡುಗೆಗಳು ಆಗಿರುತ್ತವೆ. ಇವುಗಳನ್ನು ತನ್ನ ಆಸ್ತಿಯಲ್ಲಿ (ಜಿಂದಗಿ) ತೊಡಗಿಸಿರುತ್ತದೆ. ನಗದು ಮತ್ತು ಬ್ಯಾಂಕ್ ಶಿಲ್ಕುಗಳು, ಹೂಡಿಕೆಗಳು, ಸಾಲಗಳು ಮತ್ತು ಮುಂಗಡಗಳು, ಚರ ಮತ್ತು ಸ್ಥಿರ ಆಸ್ತಿಗಳು. ಈ ಆಸ್ತಿಗಳ ನೈಜ, ನಿಖರ ಪರಿಶೀಲನೆ ಆದಲ್ಲಿ ಸಂಪನ್ಮೂಲಗಳು (ಜವಾಬ್ದಾರಿಗಳು, ಸಾಲ) ಎಲ್ಲಿ, ಹೇಗೆ ತೊಡಗಿಸಲಾಗಿದೆ ಎಂಬುದು ಕಂಡು ಬರುತ್ತದೆ. ನಗದು ಪರಿಶೀಲನೆ ನಡೆಸಿ, ನಗದು ಇರುವುದನ್ನು ಖಾತ್ರಿಪಡಿಸಿಕೊಳ್ಳಬೇಕಾಗುತ್ತದೆ. ಬ್ಯಾಂಕಿನಲ್ಲಿನ ಶಿಲ್ಕು ಬಗ್ಗೆ ಬ್ಯಾಂಕಿನಿಂದ ದೃಢೀಕರಣ ಪಡೆದು ಖಚಿತ ಪಡಿಸಿಕೊಳ್ಳಬೇಕು. ಹೂಡಿಕೆಗಳ ಬಗ್ಗೆ ಇರುವ ದಾಖಲಾತಿಗಳು, ದೃಢೀಕರಣಗಳು ರಕ್ಷಣೆಗಳ ಸಂಬಂಧಿಸಿದ ಸಂಸ್ಥೆಗಳಿಂದ ಇವುಗಳ ಅಸಲಿಯತ್ತಿನ ಬಗ್ಗೆ ಖಚಿತಗೊಳಿಸಬೇಕು. ತಃಖ್ತೆಯಲ್ಲಿನ ಮೊತ್ತಕ್ಕೂ ದಾಖಲಾತಿಯಲ್ಲಿನ ಮೊತ್ತಕ್ಕೂ ತಾಳೆ ಇರಬೇಕಾಗುತ್ತದೆ. ಬೌಧಿಕ ಇರುವಿಕೆ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು.

ಪತ್ತಿನ ಸಹಕಾರ ಸಂಸ್ಥೆಗಳು, ಪತ್ತು ವ್ಯವಹಾರ ನಡೆಸುತ್ತಿರುವ ಸಹಕಾರ ಸಂಸ್ಥೆಗಳು, ಸಹಕಾರ ಬ್ಯಾಂಕ್‌ಗಳು ಇವುಗಳಲ್ಲಿ ಅವರ ಪ್ರಮುಖ ಆಸ್ತಿಯೇ 'ಸಾಲಗಳು ಮತ್ತು ಮುಂಗಡಗಳು'. ಇದರ ವಾಸ್ತವತೆ ಮತ್ತು ಆರೋಗ್ಯವೇ ಸಂಸ್ಥೆಯ ಆಗುಹೋಗುಗಳಿಗೆ ಕಾರಣವಾಗಿರುತ್ತದೆ. ಇದರ ಸವಿವರವಾದ ಪರಿಶಿಷ್ಠ (ಷಡ್ಯೂಲ್) ನಿಖರವಾಗಿ ಪ್ರಕರಣಾವಾರು (ಕೇಸ್ ಬೈ ಕೇಸ್ ಸ್ಟಡಿ, ಅನಾಲಿಸಿಸ್) ವಿಶ್ಲೇಷಣೆ ಮಾಡಲೇಬೇಕಾಗಿರುತ್ತದೆ.

ದಾಖಲೆಗಳ ಪರಿಶೀಲನೆಯಲ್ಲದೆ ಸಾಲಗಾರರ ಪರಿಶೀಲನೆ ಅವರು ಒದಗಿಸಿರುವ ರಕ್ಷಣಾತ್ಮಕ ಆಸ್ತಿಗಳ ಬೌಧಿಕ ಪರಿಶೀಲನೆ ಅತಿಅಗತ್ಯ. ಸಹಕಾರ ಸಂಸ್ಥೆಗಳಲ್ಲಿ ಅವರು ರಚಿಸಿಕೊಂಡಿರುವ ಸಾಲ ನೀತಿ, ನಿಯಮಗಳು ಅವುಗಳ ಉಲ್ಲಂಘನೆ, ಬ್ಯಾಂಕ್‌ಗಳಲ್ಲಿ ರಿಸರ್ವ್ ಬ್ಯಾಂಕ್ ನಿಗದಿ ಪಡಿಸಿದ ಮಾನದಂಡಗಳು ಉದಾ: ವಲಯಾವಾರು ತೊಡಗಿಸುವಿಕೆ (exposure norms) ಸಾಲ ಗರಿಷ್ಠ ಮಿತಿ ಎಡರು ತೊಡಕುಗಳು (risks) ಇವುಗಳ ನೈಜ, ನಿಖರ ನಿಷ್ಠೂರವಾದ ಪರಿಶೀಲನೆ ಅಗತ್ಯ. ಇದೇ ರೀತಿಯಲ್ಲಿ'ಖರೀದಿ ಮಾರಾಟ' 'ರೂಪಾಂತರ/ ಸಂಸ್ಕರಣೆ' ಸಹಕಾರ ಸಂಸ್ಥೆಗಳಲ್ಲಿ ಆಖೈರು ದಾಸ್ತಾನಿನ ವಾಸ್ತವ ಪರಿಸ್ಥಿತಿ ಬೌಧಿಕ ಪರಿಶೀಲನೆ ಅತಿ ಅಗತ್ಯ. ಇತರೆ ಚರ ಮತ್ತು ಸ್ಥಿರಾಸ್ತಿಗಳು, ಅವುಗಳ ಸಂಬಂಧಿಸಿದ ದಾಖಲಾತಿಗಳು, ಕಡತಗಳು, ರಿಜಿಸ್ಟರ್‌ಗಳು ಮತ್ತು ಅವುಗಳ ಬೌಧಿಕ ಪರಿಶೀಲನೆ ಬಹು ಮುಖ್ಯ. ಈ ಪರಿಶೀಲನೆಗಳಲ್ಲಿ ವಿಫಲವಾಗಿರುವುದು 'ಹತ್ತಿಕೊಂಡು ಉರಿದ ಮೇಲೆ ಕೋಟೆ ಬಾಗಿಲು ಹಾಕಿದರು' ಎನ್ನುವ ಪರಿಸ್ಥಿತಿಗೆ ಕಾರಣವಾಗಿದೆ. ಬಹಳಷ್ಟು ಪ್ರಕರಣಗಳಲ್ಲಿ ಪರಿಸ್ಥಿತಿ ಕೈಮೀರಿ ಸರಿಪಡಿಸಲಾರದ ಮಟ್ಟವನ್ನು ಮುಟ್ಟಿರುತ್ತೇವೆ. ಹೀಗಾಗಿ ಅನೇಕ ವೇಳೆ ಪರಿವೀಕ್ಷಣೆ, ಲೆಕ್ಕಪರಿಶೋಧನೆ ಕ್ರಮಗಳು 'ಶವ ಪರೀಕ್ಷೆ'ಯಾಗುತ್ತದೆ ವಿನಃ ಸದಸ್ಯರ, ಸಾರ್ವಜನಿಕರ ಹಿತಾಸಕ್ತಿ, ನಿರೀಕ್ಷೆ, ಆಸೆ ಆಕಾಂಕ್ಷೆ, ಅಗತ್ಯತೆಗಳನ್ನು ಈಡೇರಿಸಲು ಸಾಧ್ಯವಾಗುವುದಿಲ್ಲ.

ಅನೇಕ ಸೋರಿಕೆಗಳು, ದುರುಪಯೋಗಗಳು ದುರ್ವಿನಿಯೋಗಗಳು, ಮಿತ್ಯ ಆಸ್ತಿಗಳು, ನಷ್ಟಗಳು ಆಸ್ತಿ ತಃಖ್ತೆಯಲ್ಲಿ ಆಸ್ತಿಯಾಗಿ ಹುದುಗಿರುತ್ತವೆ. ಇವುಗಳು 'ಕನ್ನಡಿಯೊಳಗಿನ ಗಂಟು'. 'ಬ್ಯಾಂಕ್‌ಗಳಲ್ಲಿ ಆಸ್ತಿ ವರ್ಗೀಕರಣದಲ್ಲಿ ಆಗುತ್ತಿರುವ ಅಗಾಧವಾದ ವ್ಯತ್ಯಾಸಗಳು ಮತ್ತು ತಪ್ಪುದಾರಿಗೆ ಕಾರಣವಾಗಿರುವ ಲೆಕ್ಕತಃಖ್ತೆಗಳನ್ನು ತಡೆಯಲು ಬಿಗಿ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ. (ಎಕನಮಿಕ್‌ಟೈಮ್ಸ್ ವರದಿ ದಿನಾಂಕ:28–4–2021) ಎಂದು ರಿಸರ್ವ್ ಬ್ಯಾಂಕ್ ತಿಳಿಸಿರುತ್ತದೆ. ಈ ಅಕ್ರಮಗಳು "ಆತ್ಮ ವಂಚನೆ"ಯಲ್ಲದೇ ಮತ್ತೇನು? ತನ್ನ ಮೇಲೆ ವಿಶ್ವಾಸ ವಿರಿಸಿರುವ ಸದಸ್ಯರಿಗೆ, ಠೇವಣಿದಾರರಿಗೆ ಮೋಸವೆಸಗಿದಂತಾಗಲಿಲ್ಲವೇ? ಸಹಕಾರ ಚಳುವಳಿಗೆ ಇದು ಮಾರಕವಾಗಿ ಪರಿಣಮಿಸುವುದಿಲ್ಲವೇ? ಸಹಕಾರಿಗಳು 'ಆತ್ಮಾವಲೋಕನ' ಮಾಡಿಕೊಳ್ಳಲು ಇದು ಸಕಾಲ.



## ಜೂನ್ 5 – ವಿಶ್ವಪರಿಸರ ದಿನ

ಧ್ಯೇಯ: ಪರಿಸರ ವ್ಯವಸ್ಥೆ ಪುನರ್ ಸ್ಥಾಪನೆ

# ಜೀವ ವೈವಿಧ್ಯತೆಯ ಮೇಲೆ ಮನುಷ್ಯ ಆಕ್ರಮಣ – ಎಚ್ಚರ ತಪ್ಪಿದರೆ ಆಪತ್ತು

**ಮನುಷ್ಯನಿಗೆ ಭೂಮಿಯ ಅಗತ್ಯವಿದೆಯೇ ವಿನಹ ಭೂಮಿಗೆ ಮನುಷ್ಯನ ಅಗತ್ಯವಿಲ್ಲ. ಈ ಭೂಮಿ ಹಾಗೂ ಪರಿಸರ ಮತ್ತು ಅದರಲ್ಲಿರುವ ಪಶು, ಪಕ್ಷಿ, ಪ್ರಾಣಿಗಳು, ಗಿಡ ಮರ ನದಿಗಳು ಮನುಷ್ಯನಿಲ್ಲದಿದ್ದರೂ ತಮ್ಮ ಅಸ್ಥಿತ್ವ ಉಳಿಸಿಕೊಳ್ಳುವ ಸಾಮರ್ಥ್ಯ ಹೊಂದಿವೆ. ಆದರೆ ಗಿಡ ಮರ ನದಿಗಳು ಇಲ್ಲದಿದ್ದರೆ ಮನುಷ್ಯ ಭೂಮಿಯ ಮೇಲೆ ತನ್ನ ಅಸ್ಥಿತ್ವ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ, ಮನುಷ್ಯ ಪರಾವಲಂಬಿ ಜೀವಿ ಆತ ಬದುಕಲು ನೀರು, ಗಾಳಿ, ಗಿಡ, ಮರ, ಪಶು, ಪಕ್ಷಿಗಳ ಅಗತ್ಯವಿದೆ.**

ಆದರೆ ಸ್ವಾರ್ಥ ಮತ್ತು ದುರಾಸೆಯಿಂದ ಕೂಡಿದ ಮನುಷ್ಯ ಇಡಿ ಭೂ ಮಂಡಲವನ್ನೆ ತನ್ನ ಕಪಿಮುಷ್ಠಿಗೆ ತೆಗೆದುಕೊಳ್ಳಲು ನಿರಂತರವಾಗಿ ಪ್ರಯತ್ನ ನಡೆಸುತ್ತಿದ್ದು ಆ ಹಿನ್ನಲೆಯಲ್ಲಿ ನದಿ, ಸಮುದ್ರ, ಅರಣ್ಯ, ಮರುಭೂಮಿ, ಪಶು ಪಕ್ಷಿಗಳು ಹಾಗೂ ವನ್ಯಜೀವಿಗಳ ಸಹಿತ ಪ್ರತಿಯೊಂದರ ಮೇಲೂ ಏಕಸ್ವಾಮ್ಯದಿಂದ ಅಧಿಕಾರ ಚಲಾಯಿಸಲು ನಿರಂತರ ಪ್ರಯತ್ನ ಶೀಲನಾಗಿದ್ದಾನೆ.

### ಮನುಷ್ಯನ ಆಕ್ರಮಣ ಮತ್ತು ಜೀವ ವೈವಿಧ್ಯತೆ

ಪಶ್ಚಿಮ ಘಟ್ಟಗಳ ಜೀವ ವೈವಿಧ್ಯ ಸುಸ್ಥಿರ ಬಳಕೆ ಮತ್ತು ಸಂರಕ್ಷಣೆಯ ನೀತಿಗಳು. ಇತ್ತೀಚೆಗಷ್ಟೇ ಯುನೆಸ್ಕೋದಿಂದ ವಿಶ್ವಪರಂಪರೆಯ ಪಟ್ಟಿಗೆ ಪಶ್ಚಿಮ ಘಟ್ಟಗಳ 39 ನೆಲೆಗಳು ಸೇರಿವೆ. ಪ್ರಪಂಚದ ಅತ್ಯಂತ ಮಹತ್ವಪೂರ್ಣವಾದ ಎಂಟು ಜೈವಿಕ ವೈವಿಧ್ಯ 'ಅತೀ ಅಗ್ರ ತಾಣ' (ಬಯೋ ಡೈವರ್ಸಿಟಿ ಹಾಟೆಸ್ಟ್ ಸ್ಪಾಟ್ಸ್)ಗಳಲ್ಲಿ ಪಶ್ಚಿಮಘಟ್ಟಗಳೂ ಒಂದು. ಪ್ರದೇಶವೊಂದರಲ್ಲಿ ಇರುವ ಜೀವ ಪ್ರಭೇದಗಳ ಒಟ್ಟು ಮೊತ್ತವನ್ನು ಆ ಪ್ರದೇಶದ ಜೀವ ವೈವಿಧ್ಯ ಎಂದು ಕರೆಯುತ್ತಾರೆ. ಜಗತ್ತಿನ ಒಟ್ಟು ಭೂಭಾಗದ ಶೇಕಡಾ 2.5 ರಷ್ಟು ಮಾತ್ರ ಇರುವ ಭಾರತದ ಜೈವಿಕ ವೈವಿಧ್ಯ ಜಾಗತಿಕ ಜೀವ ವೈವಿಧ್ಯದ ಶೇಕಡಾ 7.8 ರಷ್ಟು. ಇವುಗಳಲ್ಲಿ ಬಹುಪಾಲು ಇರುವುದು ಪಶ್ಚಿಮ ಘಟ್ಟಗಳಲ್ಲಿ.

ಕೇವಲ ಪಶ್ಚಿಮಘಟ್ಟಗಳಲ್ಲಿ ಮಾತ್ರ ಕಂಡು ಬರುವ ಸ್ಥಳೀಯ ಪ್ರಭೇದಗಳಲ್ಲಿ 150 ಹುಲ್ಲು, 100 ಆರ್ಕಿಡ್, 11 ತಾಳೆ, 9 ಮೆಣಸು ಮತ್ತು 7 ಸಿಸ್ಟು ಪ್ರಭೇದಗಳಿವೆ. ಇಲ್ಲಿಯ ಸೂಕ್ಷ್ಮ ಪ್ರದೇಶಗಳನ್ನು ಅಧ್ಯಯನ ಮಾಡಿ, ಅದರ ಸಂರಕ್ಷಣೆಗೆ ಅಗತ್ಯವಾದ ನೀತಿ ನಿಲುವುಗಳನ್ನು ರೂಪಿಸಲು ಕೇಂದ್ರ ಸರ್ಕಾರ ರಚಿಸಿದ್ದ 14 ಪರಿಣತರ ತಂಡ ಪ್ರೊ. ಮಾಧವ ಗಾಡ್ಗೀಳ್ ಅವರ ನೇತೃತ್ವದಲ್ಲಿ ಅಧ್ಯಯನ ನಡೆಸಿ, 2011ರ ಆಗಸ್ಟ್‌ನಲ್ಲಿ ವಿವರವಾದ ವರದಿಯನ್ನು ಸಲ್ಲಿಸಿತು.

ಈ ವರದಿಯಲ್ಲಿ, ಪಶ್ಚಿಮ ಘಟ್ಟಗಳನ್ನು ಜೀವ ಪರಿಸ್ಥಿತಿಯ ದೃಷ್ಟಿಯಿಂದ ಮೂರು ವಿವಿಧ ಹಂತಗಳ ಸೂಕ್ಷ್ಮ ವಲಯಗಳನ್ನಾಗಿ ವಿಭಾಗಿಸಲಾಗಿದೆ. ಮೊದಲ ವರ್ಗದ ಸೂಕ್ಷ್ಮ ವಲಯದಲ್ಲಿ ಯಾವುದೇ ರೀತಿಯ ಜಲ ವಿದ್ಯುತ್ ಯೋಜನೆ ಅಥವಾ ಜಲಾಶಯಗಳ ನಿರ್ಮಾಣಕ್ಕೆ ಅವಕಾಶವಿಲ್ಲ. ಇದರಲ್ಲಿ ಒಟ್ಟು 26 ತಾಲೂಕುಗಳನ್ನು ಗುರುತಿಸಿದೆ. ಐದು ತಾಲೂಕುಗಳಲ್ಲಿ ಎರಡನೆಯ ಸೂಕ್ಷ್ಮವಲಯವನ್ನೂ, 12 ತಾಲೂಕುಗಳಲ್ಲಿ ಮೂರನೆಯ ವರ್ಗದ ಪ್ರದೇಶವನ್ನು ಗುರುತಿಸಿದೆ. ಈ ಪ್ರದೇಶಗಳಲ್ಲಿ ಯಾವ ಅಭಿವೃದ್ಧಿ ಚಟುವಟಿಕೆಗಳು ನಡೆಯಬಹುದು, ಯಾವುದು ನಡೆಯಬಾರದು ಎನ್ನುವುದನ್ನೂ ಸ್ಪಷ್ಟಪಡಿಸಿದೆ.

ಇದರೊಂದಿಗೆ ಪಶ್ಚಿಮ ಘಟ್ಟಗಳ ಸಂರಕ್ಷಣೆಯಲ್ಲಿ ಸ್ಥಳೀಯರ ಭಾಗವಹಿಸುವಿಕೆ, 2006ರ ಪರಿಶಿಷ್ಟ ಪಂಗಡ ಮತ್ತು ಅನುಸೂಚಿತ ಬುಡಕಟ್ಟು ಹಾಗೂ ಇತರೆ ಅರಣ್ಯವಾಸಿಗಳ ಹಕ್ಕುಗಳ ಅಧಿನಿಯಮ ನೀಡುವ ಸವಲತ್ತುಗಳನ್ನು ಅಲ್ಲಿಯ ಜನರಿಗೆ ಒದಗಿಸಬೇಕೆಂಬ ಶಿಫಾರಸು ಮಾಡಿದೆ. ವಿಶ್ವಪರಂಪರೆಯ 39 ತಾಣಗಳ ಸಂರಕ್ಷಣೆ ಮಾಡುವಾಗ ಈ ವರದಿಯಲ್ಲಿರುವ ಅಂಶಗಳನ್ನು ಗಮನಿಸಬೇಕೆಂಬ ಸೂಚನೆಯನ್ನು ಯುನೆಸ್ಕೋ ಭಾರತ ಸರ್ಕಾರಕ್ಕೆ ನೀಡಿದೆ.

ತೀರ ಇತ್ತೀಚಿನವರೆಗೂ 'ಜೀವ ವೈವಿಧ್ಯ' ಕೇವಲ ವಿಜ್ಞಾನಿಗಳ ಸಂಶೋಧಕರ ವಿಷಯವಾಗಿತ್ತು. ಆದರೆ ಮಾನವನ ಮೂಲಭೂತ ಅವಶ್ಯಕತೆಗಳಾದ ಅನ್ನ, ಆರೋಗ್ಯ, ಆವಾಸ, ಆದಾಯಗಳು ಬರುವುದೇ ಈ ಜೀವ ವೈವಿಧ್ಯದಿಂದ.

ಹೆಚ್ಚಾಗುತ್ತಾ ಬಂದ ಜನಸಂಖ್ಯೆ, ಮಾನವನ ಅಭಿವೃದ್ಧಿ ಪರ ಚಟುವಟಿಕೆಗಳು, ಬೇಡಿಕೆಗಳು ಜೀವ ಪರಿಸರ ವ್ಯವಸ್ಥೆಗೆ ಉಂಟು ಮಾಡಿದ ಹಾನಿ, ಆವಾಸಗಳ ನಾಶ, ಕೃಷಿ ವಿಸ್ತರಣೆ, ಪರಿಸರ ಮಾಲಿನ್ಯ ಬದಲಾಗುತ್ತಿರುವ ಹವಾಮಾನ, ಇವೆಲ್ಲವುಗಳಿಂದ ಜೀವ

ವೈವಿಧ್ಯದ ಅಳಿಯುವಿಕೆ ಹಿಂದೆಂದಿಗಿಂತಲೂ ಅಧಿಕವಾಗಿದೆ. ಪ್ರತಿ ದಿನ ಪ್ರಭೇದಗಳ ಅಳಿಯುವಿಕೆ ನೈಸರ್ಗಿಕ ಪ್ರಮಾಣಕ್ಕಿಂತ ಸಾವಿರ ಪಟ್ಟು ಹೆಚ್ಚಾಗಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ, ವಿನಾಶದ ಕೊಂಡಿ ಮಾನವನನ್ನು ತಲುಪುವ ಮುಂಚೆಯೇ ಅವನ ಎಲ್ಲ ಅವಶ್ಯಕತೆಗಳನ್ನು ಪೂರೈಸುವ ಜೀವವೈವಿಧ್ಯದ ನಾಶದಿಂದ ಅವನು ಅಳಿಯುತ್ತಾನೆ. ಹಾಗೆಯೇ ಇದೀಗ ಜನ ಸಾಮಾನ್ಯರೂ ಈ ಜೀವ ವೈವಿಧ್ಯ ಸಂರಕ್ಷಣೆಯಲ್ಲಿ ತೊಡಗಿಕೊಳ್ಳುವುದು ಅನಿವಾರ್ಯವಾಗಿದೆ.

ಇದು ಹೆಗ್ಗಳಿಕೆಯ ವಿಷಯವಲ್ಲ. ಏಕೆಂದರೆ, ಭಾರತ ಈ ನಿಟ್ಟಿನಲ್ಲಿ ಈ ವರೆಗೆ ಮಾಡಿರುವ ಪ್ರಯತ್ನ ಬಹಳ ನಿರಾಶಾದಾಯಕವಾಗಿದೆ. 22 ವರ್ಷಗಳ ಹಿಂದೆ ರಿಯೋ ಶೃಂಗ ಸಭೆಯಲ್ಲಿ ಶೇಕಡಾ 17 ರಷ್ಟು ಭೂಭಾಗವನ್ನು ಮನುಷ್ಯನ ಚಟುವಟಿಕೆಗಳಿಂದ ದೂರವಿಟ್ಟು ಸಂರಕ್ಷಣೆ ಮಾಡುತ್ತೇನೆಂದು ಸಹಿ ಮಾಡಿದ್ದ ಭಾರತ ಶೇಕಡಾ 4 ರಷ್ಟು ಭೂಭಾಗವನ್ನು ಮಾತ್ರ ಸಂರಕ್ಷಿತ ಪ್ರದೇಶವೆಂದು ಘೋಷಿಸಿದೆ. ಸ್ವಾತಂತ್ರ್ಯ ಪೂರ್ವದಿಂದಲೂ ರೂಪಿಸಲಾಗಿದ್ದ ನಮ್ಮ ಅಪರೂಪದ ತಳಿ ಖಜಾನೆಗಳಲ್ಲಿ ಸಂಗ್ರಹವಾಗಿದ್ದ ನಾಲ್ಕು ಲಕ್ಷ ತಳಿ ಮೂಲಗಳನ್ನು ಬಹುರಾಷ್ಟ್ರೀಯ ಕಂಪೆನಿಗಳು ಪಡೆದುಕೊಂಡಿವೆ. ವಿಶಿಷ್ಟ ಪರಿಸರಗಳಲ್ಲಿ ಬದುಕಿ ಫಲ ನೀಡಬಹುದಾಗಿದ್ದ ತಳಿಗಳು ಅನ್ಯರ ಪಾಲಾಗಿವೆ. ಆಹಾರ, ಔಷಧಿಗಳ ಮೂಲವಾದ ವನ್ಯ ಪ್ರಬೇಧಗಳು ನಶಿಸಿ ಹೋಗುತ್ತಿವೆ.



ಭೂ ಮಂಡಲದಲ್ಲಿರುವ ಮೂಕ ಪ್ರಾಣಿಗಳ, ಗಿಡ ಮರಗಳ ಹಾಗೂ ಹರಿಯುವ ನದಿಯ ನೈಸರ್ಗಿಕ ಅಧಿಕಾರ ಮೊಟಕುಗೊಳಿಸಿ ಅದರ ಮೇಲೆ ಸವಾರಿ ಮಾಡಲು ಆರಂಭಿಸಿದ್ದಾನೆ.

ಮಾನವನ ಕಲ್ಯಾಣವನ್ನು ಮಾತ್ರದೃಷ್ಟಿಯಲ್ಲಿಟ್ಟು ಕೊಂಡು ನೂರಾರು ರೀತಿಯ ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯದಲ್ಲಿ ನಿರಂತರವಾಗಿ ತೊಡಗಿರುವ ಮನುಷ್ಯ ಈ ಭೂಮಿಯ ಮೇಲೆ ಬದುಕಲು ಮನುಷ್ಯನಷ್ಟೆ ಸಮಾನ ಹಕ್ಕು ಹೊಂದಿರುವ ಪ್ರಾಣಿ, ಪಕ್ಷಿ, ಕ್ರಿಮಿ ಕೀಟ, ಗಿಡ ಮರ ಹಾಗೂ ಜಲಚರಗಳನ್ನು ನಿರಂತರವಾಗಿ ನಾಶ ಮಾಡುವ ಕಾರ್ಯದಲ್ಲಿ ನಿರತನಾಗುವ ಮೂಲಕ ತನ್ನ ಅಂತ್ಯಕ್ಕೆ ನಾಂದಿ ಹಾಡುತ್ತಿದ್ದಾನೆ. ಆಧುನಿಕ ಮನುಷ್ಯ ನಡೆಸುತ್ತಿರುವ ಶೇಕಡ 90 ರಷ್ಟು ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು ಮಾನವ ಕೇಂದ್ರಿತವಾಗಿದ್ದು ಇದು ಪರಿಸರಕ್ಕೆ ಸಂಪೂರ್ಣವಾಗಿ ಮಾರಕವಾಗಿದೆ ಎಂಬುದು ಸೂರ್ಯನ ಬೆಳಕಿನಷ್ಟೆ ಸತ್ಯವಾಗಿದೆ. ಈ ಎಲ್ಲಾ ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯಗಳು ಮನುಷ್ಯನಿಗೆ ಅಂತಿಮವಾಗಿ ಸುಖ ಮತ್ತು ಆರೋಗ್ಯ ನೀಡುವುದರ ಬದಲು ಪರಿಸರಕ್ಕೆ ಮಾರಕವಾಗಿದೆ ಅಲ್ಲದೆ ಮಾನವ ಜೀವಿಯನ್ನು ಇನಷ್ಟು ರೋಗಗ್ರಸ್ತನನ್ನಾಗಿ ಮಾಡುವುದರೊಂದಿಗೆ ಸುಖ ಶಾಂತಿ, ನೆಮ್ಮದಿಯನ್ನು ಕಸಿದುಕೊಂಡಿದೆ. ಒಟ್ಟಾರೆಯಾಗಿ ಮನುಷ್ಯ ತಾನು ನೇಯ್ದ ಬಲೆಯಲ್ಲಿ ಸಿಕ್ಕಿಹಾಕಿಕೊಂಡು ಹೊರಗೆ ಬರಲಾರದೆ ವಿಲಿವಿಲಿ ಒದ್ದಾಡುತ್ತಿದ್ದಾನೆ.

### ಭೂಮಿಯನ್ನು ಮರೆತ ಮನುಷ್ಯ

ಈ ಭೂಮಂಡಲ ಶೇಕಡಾ 71 ರಷ್ಟು ನೀರಿನಿಂದ ಆವೃತವಾಗಿದ್ದು. ಅದರಲ್ಲಿ ಶೇಕಡಾ 96 ರಷ್ಟು ಸಮುದ್ರದ ಉಪ್ಪು ನೀರಿನಿಂದ ಕೂಡಿದೆ. ಉಳಿದದ್ದು ನದಿ, ತೊರೆ ಹಳ್ಳ ಕೊಳ್ಳ, ಜಲಪಾತಗಳು. ಉಳಿದ ಶೇಕಡಾ 29 ರಷ್ಟು ಭೂ ಭಾಗದಲ್ಲಿ ಶೇಕಡಾ 31 ರಷ್ಟು ಭಾಗ ಅರಣ್ಯಗಳಿಂದ ತುಂಬಿದೆ. ಶೇಕಡಾ 19 ರಷ್ಟು ಭಾಗ ಮರಭೂಮಿಯಿಂದ ಕೂಡಿದ್ದು ಶೇಕಡಾ 10 ರಷ್ಟು ಭಾಗ ಭೂಮಿ ಹಿಮ ನದಿ ಹಾಗೂ ಹಿಮಚ್ಛಾದಿತವಾಗಿದೆ. ವಾಸಕ್ಕೆ ಯೋಗ್ಯವಿರುವ ಭೂಮಿಯ ಪೈಕಿ ಜಗತ್ತಿನ ಶೇಕಡಾ 95 ರಷ್ಟು ಜನರು ಶೇಕಡಾ 10 ರಷ್ಟು ಜಾಗದಲ್ಲಿ ವಾಸಿಸುತ್ತಿದ್ದಾರೆ. ಹೀಗೆ ಶೇಕಡಾ 10 ರಷ್ಟು ಜಾಗದಲ್ಲಿ ವಾಸಿಸುತ್ತಿರುವ ಶೇಕಡಾ 95 ರಷ್ಟು ಮಂದಿ ತಮ್ಮ ಸುಖ ಹಾಗೂ ಐಶಾರಾಮಿ ಜೀವನಕ್ಕಾಗಿ ನಿರಂತರವಾಗಿ ಪರಿಸರ ನಾಶದ ಕಾರ್ಯದಲ್ಲಿ ತೊಡಗಿದ್ದಾರೆ ಎಂಬುದು ಅರಗಿಸಿಕೊಳ್ಳಲಾರದ ಕಟು ಸತ್ಯವಾಗಿದೆ. ಈ ಕಾರಣದಿಂದ ವಾಯು, ಜಲ, ಪರಿಸರ ಮಾಲಿನ್ಯ, ಅರಣ್ಯ ನಾಶ, ವನ್ಯಜೀವಿಗಳ ಹಾಗೂ ಜಲಚರಗಳ ನಿರಂತರ ಹತ್ಯೆ ಏಗ್ಗಿಲ್ಲದೆ ನಡೆಯತ್ತಿದೆ. ತನ್ನ ಸ್ವಯಂಕೃತ ಅಪರಾಧದಿಂದ ನೂರಾರು ರೀತಿಯ ದೈಹಿಕ ಹಾಗೂ ಮಾನಸಿಕ ಕಾಯಿಲೆಗಳಿಂದ ನರಳುತ್ತಿರುವ ಮನುಷ್ಯ ತನ್ನ ದುಡಿಮೆಯ ಬಹುಪಾಲು ಹಣವನ್ನು ಆಹಾರಗಳಿಗಿಂತ ಔಷದಿಗಳಿಗೆ ವೆಚ್ಚಮಾಡುವಂತಹ ಅನಿವಾರ್ಯ ಸ್ಥಿತಿ ಸೃಷ್ಟಿಸಿಕೊಂಡಿದ್ದಾನೆ. ಹುಟ್ಟಿದ ಮಗುವಿನಿಂದ ಹಿಡಿದು ಸಾಯುವ ಹಿರಿಯ ಜೀವಿಗಳತನಕ ಕಾಯಿಲೆಗಳೆಂಬ ಚಕ್ರವ್ಯೂಹದಲ್ಲಿ ಸಿಲುಕಿ ನರಳುವಂತಾಗಿದೆ. ಇಂದು ದೇಹದ ಪ್ರತಿ ಅಂಗಾಂಗಳ ಚಿಕಿತ್ಸೆಗೂ ಲಕ್ಷಾಂತರ ರೂಪಾಯಿ ವೆಚ್ಚಮಾಡುವ ಪರಿಸ್ಥಿತಿ ಸೃಷ್ಟಿಯಾಗಿರುವುದು ಮಾನವ ಕುಲಕ್ಕೆ ಎಚ್ಚರಿಕೆಯ ಗಂಟೆಯಾಗಿದೆ. ಪರಿಸರ ರಕ್ಷಣೆಗಾಗಿ ಸರ್ಕಾರಗಳು ಪ್ರತಿವರ್ಷ ಸಾವಿರಾರು ಕೋಟಿ ರೂಪಾಯಿ ವೆಚ್ಚ ಮಾಡಿದರೂ ಅದರ ಪರಿಣಾಮ ನೀರಿನ ಮೇಲಿನ ಹೋಮದಂತಾಗಿದೆ.

**– ಮಂಜುನಾಥ ನಾಯ್ಕ್**
**ಪತ್ರಕರ್ತರು, ಬೆಂಗಳೂರು.**

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. ಸಹಕಾರ ಸಂಘದ ಆಡಳಿತ ಮಂಡಳಿಯಲ್ಲಿ ಆಕಸ್ಮಿಕವಾಗಿ ಖಾಲಿ ಬಿದ್ದಿರುವ ನಿರ್ದೇಶಕರ ಸ್ಥಾನಗಳನ್ನು ಭರ್ತಿ ಮಾಡಲು ಕಾಯ್ದೆಯ ಕಲಂ ______ ರಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.**

ಎ) ಕಲಂ 29ಜಿ

ಬಿ) ಕಲಂ 29ಎಫ್

ಸಿ) ಕಲಂ 29ಇ

ಡಿ) ಕಲಂ 29ಹೆಚ್

**2. ಸಹಾಯ ಪಡೆಯದ ಸಂಘದಲ್ಲಿ (non-assisted co-operative society) ಮುಖ್ಯ ಕಾರ್ಯನಿರ್ವಾಹಕನನ್ನು ನೇಮಕ ಮಾಡುವ ಅಧಿಕಾರ _______ ರವರಿಗೆ ದತ್ತವಾಗಿರುತ್ತದೆ.**

ಎ) ಸರ್ಕಾರ

ಬಿ) ಸಂಘದ ಅಧ್ಯಕ್ಷರು

ಸಿ) ಸಹಕಾರ ಸಂಘಗಳ ನಿಬಂಧಕರು

ಡಿ) ಸಂಘದ ಆಡಳಿತ ಮಂಡಲಿ

**3. ಸಹಕಾರ ಸಂಘದಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಚುನಾಯಿಸುವುದು ____________**

ಎ) ಸದಸ್ಯರು

ಬಿ) ಸಹಸದಸ್ಯರು

ಸಿ) ಆಡಳಿತ ಮಂಡಲಿ ನಿರ್ದೇಶಕರು

ಡಿ) ಸರ್ಕಾರದಿಂದ ನೇಮಿಸಲಾಗುತ್ತದೆ.

**4. ಸಹಕಾರ ಸಂಘಗಳ ಕಾಯ್ದೆ ಕಲಂ __ ರಡಿಯಲ್ಲಿ ಸದಸ್ಯರಲ್ಲದವರು ಸಂಘದಲ್ಲಿ ಸಾಲ ಪಡೆಯಲು ಅರ್ಹರಿರುವುದಿಲ್ಲ.**

ಎ) ಕಲಂ 59

ಬಿ) ಕಲಂ 61

ಸಿ) ಕಲಂ 60

ಡಿ) ಕಲಂ 62

**5. ಯಾವ ಸಂದರ್ಭದಲ್ಲಿ ಸಹಕಾರ ಸಂಘಗಳ ನಿಬಂಧಕರು ಸಂಘದ ಅವ್ಯವಹಾರಗಳ ಬಗ್ಗೆ ಶಾಸನ ಬದ್ಧ ವಿಚಾರಣೆಗೆ ಆದೇಶಿಸಬಹುದಾಗಿದೆ.**

ಎ) ನಿಬಂಧಕರು ಸ್ವ ಇಚ್ಛೆಯಿಂದ

ಬಿ) ಸಾಮಾಜಿಕ ಸಹಕಾರ ಸಂಘದ ಮನವಿ

ಸಿ) ಸಂಘದ ಆಡಳಿತ ಮಂಡಳಿಯ ಬಹುಸಂಖ್ಯಾ ಸದಸ್ಯರ ಠರಾವು

ಡಿ) ಮೇಲಿನ ಯಾವುದಾರೊಂದು

**6. ಸಹಕಾರ ಸಂಘವನ್ನು ಸಮಾಪನೆಗೊಳಿಸಲು ಕಾಯ್ದೆಯ ಕಲಂ _________ ರಲ್ಲಿ ಅವಕಾಶವಿರುತ್ತದೆ.**

ಎ) ಕಲಂ 69

ಬಿ) ಕಲಂ 74

ಸಿ) ಕಲಂ 72

ಡಿ) ಕಲಂ 73

**7. ಸಹಕಾರ ಸಂಘವು ಹಣಕಾಸು ಸಂಬಂಧಿಸಿದ ವಿವಾದಗಳನ್ನು ನಿಬಂಧಕರ ನ್ಯಾಯಾಲಯದಲ್ಲಿ ಹೂಡಲು ನಿಗದಿಪಡಿಸಿರುವ ಕಾಲಮಿತಿ___ ಆಗಿರುತ್ತದೆ.**

ಎ) ಮೂರು ವರ್ಷಗಳು

ಬಿ) ಒಂದು ವರ್ಷ

ಸಿ) ಆರು ವರ್ಷಗಳು

ಡಿ) ಐದು ವರ್ಷಗಳು

**8. ಸಹಕಾರ ಸಂಘವು ನಿಬಂಧಕರ ನ್ಯಾಯಾಲಯದಲ್ಲಿ ಈ __________ ಸ್ವರೂಪನ್ನೊಳಗೊಂಡ ವಿವಾದಗಳನ್ನು ಇತ್ಯರ್ಥಕ್ಕೆ ಹೂಡಬಹುದಾಗಿದೆ.**

ಎ) ಹಣಕಾಸು ವಿವಾದಗಳು

ಬಿ) ಚುನಾವಣಾ ವಿವಾದಗಳು

ಸಿ) ನೌಕರರ ಸೇವಾ ವಿವಾದಗಳ

ಡಿ) ಮೇಲಿನ ಎಲ್ಲವು

**9. ಸಹಕಾರ ಸಂಘದ ಲೆಕ್ಕಪರಿಶೋಧನೆಗೆ ಕಾಯ್ದೆಯ ಕಲಂ ___________ ರಡಿಯಲ್ಲಿ ಅವಕಾಶ ಕಲ್ಪಿಸಿದೆ**

ಎ) ಕಲಂ 68

ಬಿ) ಕಲಂ 62

ಸಿ) ಕಲಂ 63

ಡಿ) ಕಲಂ 65

**10. ಸಹಕಾರ ಸಂಘವು ತನ್ನ ನಿವ್ವಳ ಲಾಭದಲ್ಲಿ ಕಾಯ್ದಿಟ್ಟ ನಿಧಿಗೆ (reserve fund) ___________ ಶೇಕಡಾ ಮೊತ್ತವನ್ನು ವರ್ಗಾಯಿಸುವುದು ಕಡ್ಡಾಯವಾಗಿದೆ.**

ಎ) ಶೇಕಡಾ 25 ಹೆಚ್ಚಿಲ್ಲದಂತೆ

ಬಿ) ಶೇಕಡಾ 25 ಕಡಿಮೆಯಿಲ್ಲದೆ

ಸಿ) ಶೇಕಡಾ 25 ಸಮನಾಗಿ

ಡಿ) ಯಾವುದು ಅಲ್ಲ

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

**1 - C, 2 -B, 3 –C, 4 –B , 5 –C, 6 –C, 7 –C, 8 – C, 9 –C, 10 –C**